ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ೨೦ನೇ ಡಿಸೆಂಬರ್ ೧೯೮೯/ಪೌಷ ಶುದ್ಧ ೨೯ ೧೯೧೧ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನಲಂಕರಿಸಿದರು.]

CALLING ATTENTION TO MATTERS OF URGENT PUBLIC IMPORTANCE

MR. SPEAKER.—Now, Calling Attentions.

1) Sub : *The grave situation created due to the withdrawal of the temporary appointed teachers of the Zilla Parishads by the Govrnment.*

SRI D. B. CHANDRE GOWDA.—Sir, I call the attention of the Hon'ble Minister for Rural Development and Panchayat Raj to the grave situation created due to the direction by the Government to the Zilla Parishads, to withdraw and retrench the temporary appointed teachers of the Zilla Parishad.

SRI B. BASAVALINGAPPA (Minister for Rural Development and Panchayat Raj).—Sir, I would like to make the following statement.

Several Zilla Parishads have been recruting and appointing staff without any clear authority in law to do so. As per the provisio to Section 285 of the Zilla Parishads Act, until appropriate provisions are made under the Act, it shall be competent for Government to make by order appropriated provisions to regulate the recruitment and conditions of service of the persons appointed to the service and posts under Zilla Parishads, and the initial appointments to such services and posts may also be made by the Government. On the other hand, under Section 285 of the Act, Zilla Parishads are only competent to recruit staff by framing regulations with prveious sanction of the Government. Since such regulations have not been framed Zilla Parishads do not have the authority to reeruit staff directly. Further, a Zilla Parishad Service Commission under Secsion 173 (4C) of the Act, has hitherto not been constituted.

ಶ್ರೀ ವಾಟಾಳ್ ನಾಗರಾಜ್.—ಇದೇನಿದು ಮಾನ್ಯ ಮಂತ್ರಿಗಳು ಇಂಗ್ಲೀಷ್ ಭಾಷೆಯಲ್ಲಿ ಉತ್ತರ ಓದುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಯವರು ಸಾಧ್ಯವಾದಷ್ಟು ಕನ್ನಡದಲ್ಲಿಯೇ ಉತ್ತರ ಕೊಡಲಿ.

ಶ್ರೀ ವಾಟಾಳ್ ನಾಗರಾಜ್.—ಈ ವಿಷಯದಲ್ಲಿ ನಾನು ಮಾನ್ಯ ಪೊಯ್ಲಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅವರೂ ಏನೇ ಕೋಟ್ ಮಾಡಿದರೂ ಕನ್ನಡದಲ್ಲೆಯೇ ಹೇಳುತ್ತಾರೆ. ಇವರೇನು ಲಂಡನ್‌ನಿಂದ ಈಗತಾನೇ ಸಭೆಗೆ ಬಂದಹಾಗೆ ಮಾತನಾಡುತ್ತಿದ್ದಾರೆ. ಸರ್ಕಾರದ ಈ ವ್ಯವಹಾರವನ್ನು ನೋಡಿ ನಾವು ವ್ಯಥೆಯಿಂದ ಹೇಳುತ್ತಿದ್ದೇವೆ. ಇದೀ ಸರ್ಕಾರ ಕನ್ನಡದಲ್ಲಿಯೇ ಆಡಳಿತವನ್ನು ನಡೆಸಬೇಕೆಂದು ಕಾವಲು ಸಮಿತಿಯನ್ನು ಮಾಡಿದ್ದೇವೆ. ಈ ಬಗ್ಗೆ ಅನೇಕ ವಿಚಾರಗಳನ್ನು ಹೇಳುತ್ತಿದ್ದೇವೆ. ಆದರೆ ಈ ಬಗ್ಗೆ ನಡೆಯಲ್ಲಿ ನುಡಿಯಲ್ಲಿ ಮಾತ್ರ ಸರ್ಕಾರದ ಕಾರ್ಯಕ್ಷೇತ್ರ ಮಾತ್ರ ಸಂಪೂರ್ಣವಾಗಿ ಕನ್ನಡಕ್ಕೆ ವಿರುದ್ಧವಾಗಿದೆ, ದಯವಿಟ್ಟು ಸರ್ಕಾರದ ಮಟ್ಟದ ಎಲ್ಲಾ ವ್ಯವಹಾರ ಕನ್ನಡದಲ್ಲಿಯೇ ಆಗಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು ಕನ್ನಡದಲ್ಲಿ ಓದಬೇಕಾಗಿತ್ತು, ಈಗ ಆಂಗ್ಲ ಭಾಷೆಯಲ್ಲಿ ಹೇಳಿಕೆಯನ್ನು ಅರ್ಧ ಓದಿದ್ದೇನೆ ಉಳಿದದ್ದನ್ನು ಓದಿ ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ಕನ್ನಡದಲ್ಲಿ ಹೇಳಿಕೆ ಇದೆ ಅದನ್ನು ಓದಿ.

ಶ್ರೀ ಬಿ. ಬಸವಲಿಂಗಪ್ಪ.—ಆಂಗ್ಲ ಭಾಷೆಯಲ್ಲಿ ಅರ್ಧ ಓದಿದ್ದೇನೆ, ಅದನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಕರ್ನಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿಯಾಗಿದ್ದವರು. ಕನ್ನಡವನ್ನೆಲ್ಲಾ ಮಾನ್ಯ ಬಸವಲಿಂಗಪ್ಪನವರು ಮರೆತಿದ್ದಾರೆ.

SRI B. BASAVALINGAPPA.–Despite this several Zilla Parishads have been recruiting staff (particularly primary school teachers on contract and on an honorarium basis). Information recently collected by the Education Department indicates that about 3000 honorary teachers have been appointed in the last 1½ years. Further, several Zilla Parishads have passed resolutions for appointing additional teachers, though these resolutions have not hitherto been implemented.

Government had issued a Circular No. RDP 83 PRV. 88. dated 6-1-1989 advising Zilla Parishads not to recruit staff in this manner. The correct procedure for making recruitments would be through a properly constituted District Level Recruitment Committee (DLRC) which would ensure that the reservations policy laid down by Government and all other norms are adherd to. Despite this, some Zilla Parishads have continued to make recruitments and appoint teachers on honorary basis. This violates the Right to Equality of opportunity in matters of public employment, which is a Fundamental Right under Art. 16 of the Constitution of India. Given that there are 8.45 lakh persones with qualifications of S.S.L.C. and above on the Live Registers of Employment Exchanges in the State, their rights need to be protected. If appointments are made outside the powers vested in Zilla Parishad, such appointment will be ultra-vires of the Constitution. As this is not in the public intrest and in exercise of powers conferred upon Government to imposed restrictions and make conditions under Section 182 of the Karnataka Zilla Parishadas. Taluk Panchayat Samithis, Mandal

Panchayats and Nyaya Panchayats Act, 1983 (Karnataka Act 20 of 1985), the Government has decided to issue a direction as follows :

"Zilla Parishads and Mandal Panchayats shall not make recruitments or appoinments of any categories of officials without the prior permission of Government. Any appoinmtents already made without prior permission are deemed to be irregular."

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) — ಸನ್ಮಾನ್ಯ ಅಧ್ಯಕ್ಷರೆ, ವಿಧಾನ್ಯ ಮಂತ್ರಿಗಳೆಂ ತಮ್ಮ ಹೇಳಿಕೆಯಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳು ಯಾವುದೇ ವರ್ಗದ ನೇಮಕಾತಿಗಳನ್ನು ಮಾಡಬಾರದು ಹಾಗೆ ಮಾಡಿದ್ದರೆ ಅದು ಅಕ್ರಮವೆಂದು ಪರಿಗಣಿಸಿದ್ದೇವೆಂದು ಹೇಳಿದ್ದಾರೆ. ಒಂದಿನ ಸರ್ಕಾರ ಅವರ ಭಾಷೆಯಲ್ಲಿಯೇ ಹೇಳುವುದಾದರೆ ಇಂತಹ ಸಿಬ್ಬಂದಿಯ ನೇಮಕಾತಿಗಳ ಬಗ್ಗೆ ಸೂಚನೆಗಳನ್ನು ನೀಡಿದೆ, ಎಷ್ಟು ಇಂತಹ ಆದೇಶಗಳನ್ನು ಕೊಟ್ಟಿಲ್ಲಿ ? ಮೊದಲು ನಾವು ಇದರಲ್ಲಿ ನೋಡಬೇಕಾದದ್ದು, ಇದನ್ನು ಅಕ್ರಮವೆಂದು ಹೇಳುವಂತಹ ಅಧಿಕಾರ ಸರ್ಕಾರಕ್ಕೆ ಇದೆಯೆ ? ಹಾಗೆ ಇದ್ದರೆ ಅದು ಜಿಲ್ಲಾಪರಿಷತ್‌ನ ವಿಕೇಂದ್ರೀಕರಣ ವ್ಯವಸ್ಥೆ, ಸ್ವಾಯತ್ತತೆಯ ಹಸ್ತಕ್ಷೇಪ ಆಲ್ಲವೆ ? ಒಂದು ವೇಳೆ ಜಿಲ್ಲಾಪರಿಷನ್‌ನವರು ಶಾಸನಬದ್ಧವಾಗಿ ನೇಮಕಾತಿಗಳನ್ನು ಮಾಡಿಕೊಳ್ಳದಿದ್ದಲ್ಲಿ, ನೇಮಕಾತಿ ಮಾಡಬೇಕೆಂದು ಹೇಳುವ ಉದ್ದೇಶವೇನು ? ಮತ್ತು ಈ ಉದ್ದೇಶ ಯೋಗ್ಯವಾಗಿದ್ದರೆ ಜನಹಿತವಾಗಿದ್ದರೆ, ವಿದ್ಯಾಭ್ಯಾಸಕ್ಕೆ ಪೂರಕವಾಗಿದ್ದರೆ ಇಂತಹ ನೇಮಕಾತಿಗಳನ್ನು ರದ್ದು ಪಡಿಸುವ ಮುನ್ನ ಸರ್ಕಾರ ಯಾವುದೇ ಕಾರಣವನ್ನು ಕೊಡಬೇಕಾಗಿತ್ತು. ಕೇಂದ್ರ ಸರ್ಕಾರ 'ನ್ಯಾಷನಲ್ ಪಾಲಿಸಿ ಆಫ್ ಎಜುಕೇಶನ್' ಬಗ್ಗೆ ೧೯೮೬ರಲ್ಲಿ ಒಂದು ಪಾತನ್ನು ಹೇಳಿದೆ.

> "The district boards of education will be created to manage the education upto higher secondary level. The State Governments shall attend to this aspect with all possible expedition within the framework of educational development. The Central, the State, the District and Local Level agencies will participate in the planning, coordination, monitoring and evaluation."

Based on this national policy of education, to the extent possible, ನಾವು ಅದಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲಗಳಿಗೆ ಪ್ರೈಮರಿ ಎಜುಕೇಶನ್ ಮ್ಯಾನೇಜ್ ಮಾಡುವುದಕ್ಕೆ ೧೯೮೬ರಲ್ಲಿ ಕೊಟ್ಟಿದ್ದೇವೆ. Then, Functions of Zilla Parisbads under the Zilla Parishad Act states as follows :

> "Section : 182 – **Functions of Zilla Parishads :** Subject to such exceptions restrictions and conditions as may from time to time be specified by order by the Government, it shall be the duty of every Zilla Parishad to make reasonable provision for the following matters within the area under its jurisdiction :
>
> **XI – Education and Social Education :**
>
> a) Implementation with the collaboration of Mandal Panchayat of Schemes of Adult Literacy undertaken by other bodies.
>
> b) Survey and Evaluation of educational activities.
>
> c) Assisting, encouraging and guiding of educational activities in the district including the establishment and maintenance of Primary and Secondary Schools in the District.

Subject to certain restrictions from time to time. What is the restriction ? Prior permission of the government is necessary for the appointment. ಎಲ್ಲಿಯವರೆಗೆ ಜಿಲ್ಲಾಪರಿಷತ್ತುಗಳು ತನ್ನದೇ ಆದಂತ ನಿಯಮಗಳನ್ನು ರೂಪಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ರಾಜ್ಯ ಸರ್ಕಾರ ಅಥವಾ ಕರ್ನಾಟಕ ಸ್ಟೇಟ್ ರಿಕ್ರೂಟ್‌ಮೆಂಟ್ ರೂಲ್ಸ್ ಏನಿದೆ ಅದು ಅನ್ವಯವಾಗುತ್ತದೆ. ಇಲ್ಲಿ ಉಪಾಧ್ಯಾಯರ ನೇಮಕ ಏನು ಮಾಡಿದ್ದಾರೆ ಇದರ ಅಗತ್ಯವನ್ನು ಮೊದಲು ನೋಡೋಣ. ನಮ್ಮ ರಾಜ್ಯದಲ್ಲಿ ಸುಮಾರು ೨೬ ಸಾವಿರ ಹಳ್ಳಿಗಳಿವೆ. ೧೬ ಸಾವಿರ ಏಕೋಪಾಧ್ಯಾಯ ಶಾಲೆಗಳಿವೆ, ಅವುಗಳಿಗೆ ಕಪ್ಪು ಹಲಗೆಗಳಿಲ್ಲ ಶಾಲಾಕಟ್ಟಡಗಳಿಲ್ಲ. ಜಿಲ್ಲಾಪರಿಷತ್ತುಗಳು ಇಂತಹ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ವಂಚಿತ ನಮ್ಮ ರಾಜ್ಯದಲ್ಲಿ ಸುಮಾರು ಖಾಲಿ ಇರತಕ್ಕಂಥ ಉಪಾಧ್ಯಾಯರ ಸಂಖ್ಯೆ ೨೦ ಸಾವಿರವನ್ನು ಮೀರಿತ್ತು. ನನ್ನ ಅಂದಾಜು ಸುಮಾರು ೨೧ ಸಾವಿರ. ನವಂಗೆ ಬೇಕಾಗಿರತಕ್ಕಂಥ ಪ್ರಮಾಣ ೧:೬೦ ಇದನ್ನು ಆಧಾರವಾಗಿಟ್ಟುಕೊಂಡರೆ ೨೧ ಸಾವಿರ ಇದ್ದಾರೆ. ಈಗ ನಮಗಿರುವುದು ೧:೮೦ ಪ್ಲಸ್ ಈ ಡಿಎಲ್‌ಆರ್‌ಸಿಯಿಂದ ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಇದು ಹಿಂದೆ ಖಾಲಿ ಇದ್ದಂಥ ಹುದ್ದೆಗಳಿಗೆ. ಈಗ ಹೊಸದಾಗಿ ನಿರ್ಮಾಣ ಆಗತಕ್ಕದ್ದಲ್ಲ. ಅವನ್ನು ಭರ್ತಿ ಮಾಡುವುದಕ್ಕಾಗಿ ಆಪರೇಷನ್ ಬ್ಲಾಕ್‌ಬೋರ್ಡ್ ಸ್ಕೀಮ್‌ನಲ್ಲಿ ಅಡಿಶನಲ್ ಟೀಚರ್ಸ್‌ಗೆ ಡಿಎಲ್‌ಆರ್‌ಸಿಯಲ್ಲಿ ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಇದನ್ನೆಲ್ಲಾ ಗವರ್ನಮೆಂಟಲ್ಲಿಟ್ಟುಕೊಂಡು, ನೀವು ಹಿಂದೆ ಮಂತ್ರಿಗಳಾಗಿದ್ದಾಗ ನೇಮಕಾತಿಯನ್ನು ಮಾಡುತ್ತಿದ್ದರು. ನೇಮಕಾತಿ ಎಂದರೆ ಅದೇನು ಖಾಯಂ ನೇಮಕಾತಿಗಳು ಅಲ್ಲ. ಆಯಾಯ ಸಂದರ್ಭಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಹಿಂದೆ, ನೀವೂ ಮಾಡಿದ್ದೀರಿ, ಆನಂತರ ನಾವೂ ಸಾಕಷ್ಟು ಮಾಡಿದ್ದೇವೆ. ೧೯೮೭ರಲ್ಲಿ ಒಂದು ಸುತ್ತೋಲೆ ಕಳಿಹಿಸಿದ್ದೇವೆ. ಅದರಲ್ಲಿ ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಂಚಾಯಿತಿಗಳು ನೇಮಕ ಮಾಡಿಕೊಂಡ ಹಂಗಾಮಿ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಬಾರದು ಎಂದು ಹೇಳಿದ್ದೇವೆ. ಜೊತೆಗೆ ಅಂತಹ ಎಲ್ಲಾ ಹಂಗಾಮಿ ನೌಕರರನ್ನೂ ಖಾಯಂ ಗೊಳಿಸಬೇಕೆಂದು ನಮ್ಮ ಸರ್ಕಾರ ತಿಳಿಸಿದೆ. ಈಗ ನೀವು ಆದಕ್ಕೆ ವಿರುದ್ಧವಾಗಿ ೩ ಸಾವಿರ ಉಪಾಧ್ಯಾಯರನ್ನು, ಶಾಸನಬಾಹಿರವಾಗಿದೆ ಎಂಬ ತಾಂತ್ರಿಕ ಕಾರಣ ಹೇಳಿ, ತೆಗೆದುಹಾಕಿದೆ, ಎಂದು ಹೇಳುತ್ತಿದ್ದೀರಿ. ನಿಮಗೆ ಈ ರೀತಿ ಹೇಳುವುದಕ್ಕೆ ಅಧಿಕಾರ ಇದೆಯೇ ? ಜಿಲ್ಲಾಪರಿಷತ್ ಸ್ವಾಯತ್ತತೆಯಲ್ಲಿ, ಕಾಯಿದೆ ೧೮೨ರ ವ್ಯಾಪ್ತಿಯಲ್ಲಿ ಅವರು ನೇಮಕ ಮಾಡಿಕೊಂಡಿದ್ದಾರೆ. ನನ್ನ ಮಾಹಿತಿ ಪ್ರಕಾರ, ಅವರು ಹೀಗೆ ನೇಮಕ ಮಾಡಿಕೊಳ್ಳುವಾಗ ರೋಸ್ಟರ್ ಸಿಸ್ಟಂ ಫಾಲೋ ಮಾಡಿದ್ದಾರೆ. ನಾನು ವಿಶೇಷವಾಗಿ ಬೆಂಗಳೂರು ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಹಾಗೂ ಇನ್ನೊಂದೆರಡು ಜಿಲ್ಲಾಪರಿಷತ್ತುಗಳ ಅಧ್ಯಕ್ಷರನ್ನು ಭೇಟಿ ಮಾಡಿ ಬಂದಿದ್ದೇನೆ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಸರ್ವೇಸಾಮಾನ್ಯವಾಗಿ ರಿಕ್ರೂಟ್‌ಮೆಂಟ್ ಪಾಲಿಸಿ ಬಗ್ಗೆ ಮಾತನಾಡುತ್ತಿದ್ದಾರೆ. ಇವತ್ತು ಇರತಕ್ಕ ಪ್ರಶ್ನೆ, ಹಾನರರಿಯಾಗಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹಂಗಾಮಿಯಾಗಿ ಜಿಲ್ಲಾ ಪರಿಷತ್ತಿನವರು ಏನು ನೇಮಕ ಮಾಡಿದ್ದಾರೆ ಅದಕ್ಕೆ ಸೀಮಿತವಾಗಿ ತಾವು ಪಾದವನ್ನು ಇಟ್ಟರೆ ಬಹಳ ಸಂತೋಷವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನೂ ಅದನ್ನೇ ಹೇಳುತ್ತಿದ್ದೇನೆ. ನಿಮಗೆ ಈ ರೀತಿ ಆದೇಶ ಕೊಡುವುದಕ್ಕೆ ಅಧಿಕಾರ ಇಲ್ಲ. ಕಾರಣ ಏನೆಂದರೆ, ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಯ ಮೇಲೆ ಇದು ಹೊರೆ ಆಗುವುದಿಲ್ಲ. ಈಗ ಜಿಲ್ಲಾಪರಿಷತ್ತಿನವರು, ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಏನು ನೇಮಕ ಮಾಡಿಕೊಂಡಿದ್ದಾರೆ, ಅವರಿಗೆ ಕೊಡತಕ್ಕ ತಲಾ ಅನುದಾನ, ಅವರಿಗೆ ಬರತಕ್ಕ ಸೇವಿಂಗ್ಸ್ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಈ ನೇಮಕದಲ್ಲಿ ರಾಜ್ಯ ಸರ್ಕಾರಕ್ಕೆ ಹೊರೆ ಬೀಳುವುದಿಲ್ಲ. ಆದ್ದರಿಂದ ಈ ರೀತಿ ನಿರ್ದೇಶನ ಕೊಡತಕ್ಕ ಅಧಿಕಾರ ತಮಗೆ ಇರುವುದಿಲ್ಲ. ಒಂದಂ ವೇಳೆ ನಿರ್ದೇಶನ ಕೊಟ್ಟರೆ, ಈ ಜಿಲ್ಲಾಪರಿಷತ್ ಕಾಯಿದೆಗೆ. ಜಿಲ್ಲಾಪರಿಷತ್ತಿನ ಸ್ವಾಯತ್ತತೆಗೆ ಭಂಗ ತಂದಂತೆ ಆಗುತ್ತದೆ ಮೇಲಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ದನ ಕಾಯುವುದಕ್ಕೆ ಹೋಗಬೇಕೆಂದು ಹೇಳುತ್ತೀರಾ ಅಥವಾ ಕೂಲಿ ಹೋಗಬೇಕೆಂದು ಹೇಳುತ್ತೀರಾ ? ಯಾವುದರ ಸಲುವಾಗಿ ತಾವು ಚಾಂಪಿಯನ್ ಮಾಡುತ್ತಿದ್ದೀರಿ. ಈ ಕೆಲಸ ಸ್ವಾತಂತ್ರ್ಯ ಬಂದು ೪೪ ದಶಕಗಳು ಕಳೆದರೂ, ೭ ಪಂಚವಾರ್ಷಿಕ ಯೋಜನೆಗಳು ಆದರೂ ಕೂಡ ಇಂದೂ ೧೦೦ಕ್ಕೆ ೬೦ರಷ್ಟು ಅವಿದ್ಯಾವಂತರು ಇದ್ದಾರೆ ಎಂದರೆ, ಜಿಲ್ಲಾಪರಿಷತ್ತಿನವರು ಈ ಕೆಲಸ ಮಾಡಿದರೆ, ಅದನ್ನು ನೀವು ವಿರೋಧಿಸುತ್ತಿದ್ದೀರಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಂದರೆ ಒಂದು ವರ್ಷಕ್ಕೆ ಒಂದು ಪರ್ಸೆಂಟ್, ೪೨ ವರ್ಷಕ್ಕೆ ೪೨ ಪರ್ಸೆಂಟ್ ಆಯಿತು.....

ಡಾ॥ ಜೀವರಾಜ ಆಳ್ವ.—೨೧ನೇ ಶತವಾನಕ್ಕೆ ಯಾವತ್ತು ಹೋಗುವುದು.....

ಶ್ರೀ ಡಿ.ಬಿ. ಚಂದ್ರೇಗೌಡ. – ಈಗಾಗಲೇ ಜನವರಿ ಹತ್ತಿರ ಬರುತ್ತಿದೆ, ಈಗ ಪರೀಕ್ಷೆಗಳ ಕಾಲ. ನಾನು ಮೊದಲೇ ತಮಗೆ ಹೇಳಿದಾಗಿ, ಏಕೋಪಾಧ್ಯಾಯರ ಶಾಲೆಗಳ ಸಂಖ್ಯೆಯನ್ನು ಹೇಳಿದ್ದೇನೆ. ಈ ಶಾಲೆಗಳನ್ನಿ ಮುಚ್ಚಬೇಕೇ, ಹಾಗೆ ಮುಚ್ಚಿದರೆ ಅಲ್ಲಿಯ ಮಕ್ಕಳು ಏನು ಮಾಡಬೇಕು ? ನೀವು ರೆಕ್ರೂಟ್‌ಮೆಂಟ್ ಪಾಲಿಸಿಯನ್ನು ಯಾವಾಗ ತಯಾರು ಮಾಡುತ್ತೀರಿ, ಅದು ಜಿಲ್ಲಾಪರಿಷತ್ತಿನಲ್ಲಿ ಮಂಜೂರಾತಿ ಯಾವಾಗ ಆಗುತ್ತದೆ ? ಜಿಲ್ಲಾಪರಿಷತ್ತಿಗೆ ಯಾವಾಗ ಅಧಿಕಾರ ಕೊಡುತ್ತೀರಿ ? ಳಿದ ವರ್ಷಗಳಿಂದ ಯಾವರೀತಿ ಕಾಯಿಸಿದ್ದೀವೋ, ಆದೇ ರೀತಿ ಇವತ್ತೂ ಕೂಡ ಕಾಯಿಸಬೇಕೇ ? ಒಂದು ವೇಳೆ ಜಿಲ್ಲಾಪರಿಷತ್ತುಗಳು ತಪ್ಪು ಮಾಡಿದ್ದರೆ, ಸಂಬಂಧಪಟ್ಟ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಕರೆಯಿಸಿ, ಸಭೆ ಮಾಡಿ, ಎಲ್ಲಿರಿಸರ್ವೇಷನ್ ಪಾಲಿಸಿಗೆ ವಿರುದ್ಧ ಮಾಡಿದ್ದಾರೆ, ರಾಜ್ಯಾಂಗದ ನಿಬಂಧನೆಗೆ ವಿಧಿಗೆ ಅಪಚಾರವಾಗಿದೆ ಎಂಬುದನ್ನು ವಿಮರ್ಶೆಮಾಡಿದ್ದೀರಾ ? ದಯಮಾಡಿ ಇದಕೆ. ಸಂಬಂಧಿಸಿದ ಮಾಹಿತಿ ತರಿಸಿ, ಆಗ ಸಾವಿರ ಶಿಕ್ಷಕರನ್ನು ಪಜಾ ಮಾಡಬೇಕೇ ಎಂಬುದನ್ನು ಯೋಚಿಸಿಕ್ಕೆ ಮಾನ್ಯ ಖಿರ್ಗೆಯವರು ಮಾತನಾಡುತ್ತಾ, ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ರಾಜೀನಾಮೆ ಕೊಡಬೇಕೆಂದು ಹೇಳಿದರು. ಆದಕ್ಕೂ, ರಾಜೀನಾಮೆ ಕೊಡುವುದಕ್ಕೂ ಏನು ಸಂಬಂಧ ಇದೆ ? ಹಾಗಾದರೆ ನೀವು ಸಾವಿರ ಶಿಕ್ಷಕರನ್ನು ಪಜಾ ಮಾಡುತ್ತೀರಾ ? ನೀವು ದಳ್ಳಾಳಿ ಕೆಲಸ ಮಾಡಬೇಕೆಂದು ಹೇಳುತ್ತೀರಾ ? ಗ್ರಾಮೀಣ ಪ್ರದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಕಳಿದ ಹತ್ತಾರು ವರ್ಷಗಳಿಂದ ಅನುಭವಿಸಿ, ಯಾವುದೋ ಒಂದು ಸ್ಥಿತಿಗೆ ಹೋಗಲು ಜಿಲ್ಲಾಪರಿಷತ್ತಿನವರು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ನೀವು ಶಹಬಾಸ್, ಎಂದು ಬೆನ್ನು ತಟ್ಟುವುದನ್ನು ಬಿಟ್ಟು, ಅವರ ಹೊಟ್ಟೆಗೆ ಏಕೆ ಹೊಡೆಯುತ್ತೀರಿ ?

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ತಾವು ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆ ಎಷ್ಟೋದು ಕಳಕಳಿಯಿಂದ ಮಾತನಾಡಿದಿರಿ. ಜಿಲ್ಲಾ ಪರಿಷತ್ತುಗಳು ಬಹಳ ಶ್ಲಾಘನೀಯವಾಗಿ ಕೆಲಸ ಮಾಡುತ್ತಿವೆ ಎಂದು ತಾವು ಹೇಳಿದಿರಿ. ನಾನು ಹಾಸನ ಜಿಲ್ಲಾ ಪರಿಷತ್ತಿನವರು ಮಾಡಿದಂಥ ಒಂದು ದೊಡ್ಡ ಉಪಕಾರವನ್ನು ತಮ್ಮ ಸ್ಮರಣೆಗೆ ತರಲು ಇಚ್ಛಿಪಡುತ್ತೇನೆ. ಸುಮಾರು ನೂರಾರು ಉಪಾಧ್ಯಾಯರುಗಳನ್ನು ಟ್ರಾನ್ಸ್‌ಫರ್ ಮಾಡಿಬಿಟ್ಟರು. ಏತಕ್ಕೆ ಎಂದು ಕೇಳಿದರೆ, ಕಾಂಗ್ರೆಸ್ ಕಡೆಯವರು ಎಂದು ಹೇಳಿದರು.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ.—ಇದಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಆರ್. ವಿ. ದೇಶಪಾಂಡೆ.—ಕಾಲಿಂಗ್ ಅಟೆನ್‌ಷನ್ ಇದೆ, ತಾವು ವಿರೋಧಪಕ್ಷದ ನಾಯಕರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಇವರು ಏತಕ್ಕೆ ಮಧ್ಯೆ ಏಳಬೇಕು.....

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಆ ಮಕ್ಕಳ ಕಥೆ ಏನಾಯಿತು, ಆ ಮಕ್ಕಳ ವಿದ್ಯಾಭ್ಯಾಸ ಏನಾಯಿತು ? ಆಗ ನೀವು ಏನು ಮಾಡುತ್ತಿದ್ದಿರಿ ? ಈಗ ಮಕ್ಕಳ ಬಗ್ಗೆ ಕಣ್ಣೀರು ಸುರಿಸುತ್ತಿದ್ದೀರಿ. ಎರಡು ವರ್ಷ ಆಯಿತು. ನೂರಾರು ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ನಿಮ್ಮ ಅಧಿಕಾರ ಇತ್ತು, ನೀವು ಮಾಡಿದ್ದುದ್ದು ಏನು ? ದಯವಿಟ್ಟು ಸ್ವಲ್ಪ ವಿಚಾರ ತಿಳಿದುಕೊಂಡು ಮಾತನಾಡಿ. ಗ್ರಾಮಾಂತರ ಪ್ರದೇಶದ ಮಕ್ಕಳ ಬಗ್ಗೆ ಕನಿಕರ ಇಟ್ಟುಕೊಂಡು ಮಾತನಾಡಿದರಲ್ಲ, ಇದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಹೆಚ್. ವಿಶ್ವನಾಥಯ್ಯ.—ಅಧ್ಯಕ್ಷರೇ, ಇವರಿಗೆ ಏನಾದರೂ ನಿಯಮ ಇದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನಿಯಮದ ಪ್ರಕಾರ ಹೋಗೋಣವೆಂದು ನನ್ನ ವಿನಂತಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ನಾನು ಅಡ್ಡಿ ಬರುತ್ತೇನೆ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು. ಯಾವ ನಿಯಮದ ಪ್ರಕಾರ ತಾವು ಈ ವಿಚಾರ ಎತ್ತಿದ್ದೀರಿ. ಆ ನಿಯಮದ ಪ್ರಕಾರ ಗಮನ ಸೆಳೆಯುವ ಸೂಚನೆಯಲ್ಲಿ ಅವರು ಉತ್ತರ ಕೊಟ್ಟಮೇಲೆ ಬರೀ ಪ್ರಶ್ನೆ ಕೇಳುವುದಕ್ಕೆ, ಸ್ಪಷ್ಟೀಕರಣ ಕೇಳುವುದಕ್ಕೆ ಒಂದೆರಡು ಅವಕಾಶ ಇರುತ್ತದೆಯೇ ಹೊರತು, ಅದರ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಉಪಾಧ್ಯಾಯರ ವಿಷಯವನ್ನು ಬಹಳ ಬಂದ್ಧಿವಂಶಿಕೆಯಿಂದ ಬಿಡಿಸಬೇಕು. ಅವರ ಪ್ರಾಣ ಉಳಿಸಬೇಕೇ ಹೊರತು, ಅವರನ್ನು ಕಿತ್ತು ಹಾಕುವುದು ಸರಿ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನಿಯಮ ಪಾಲಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ.—ಸಂಕ್ಷಿಪ್ತವಾಗಿ ಕೇಳಬೇಕೆಂದರೆ ಇಲ್ಲಿ ಸಂಕ್ಷಿಪ್ತವಾಗಿ ಬರೆದಿಲ್ಲ. ಬಹಳ ಉದ್ದವಾಗಿ ಬರೆದಿದ್ದಾರೆ. ಅದುದರಿಂದ ಪ್ಯಾರಾ ಬೈ ಪ್ಯಾರಾ ಹೋಗಬೇಕು. ಶ್ರೀಮಾನ್ ಹನುಮೇಗೌಡರಿಗೆ ಹೇಳುತ್ತೇನೆ. ಹೊಳೆನರಸೀಪುರದ ಜಿಲ್ಲಾ ಪರಿಷತ್ ವಿಚಾರ ನಾನು ಮಾತನಾಡುತ್ತಿಲ್ಲ. ಇಡೀ ರಾಜ್ಯದ ಜಿಲ್ಲಾ ಪರಿಷತ್ ವಿಚಾರ ಹೇಳುತ್ತಿದ್ದೇನೆ. ಏತಕ್ಕೆಂದರೆ ಇದು ಹಾಸನದ ಜಿಲ್ಲಾ ಪರಿಷತ್ ವಿಚಾರ ಅಲ್ಲ. ಇದು ರಾಜ್ಯದ ಜಿಲ್ಲಾ ಪರಿಷತ್‌ಗಳ ವಿಚಾರ. ಹಾಸನದ ವಿಚಾರ ಅವರಿಗೇ ಬಿಟ್ಟಿದ್ದುದ್ದು. ಏತಕ್ಕೆಂದರೆ, ಹಾಸನ ಜಿಲ್ಲೆ ಎಂದು ಹನುಮೇಗೌಡರಿಗೆ ಗೊತ್ತಾದುದ್ದೇ ಈಗ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಕಾಗೋಡು ತಿಮ್ಮಪ್ಪನವರು ಯಾವ ಸ್ಥಾನದಲ್ಲಿ ಕುಳಿತುಕೊಳ್ಳಬೇಕು ಎಂದು ಅವರಿಗೆ ತಾವು ಹೇಳಿ. ಅವರು ಇಚ್ಛೆ ಬಂದಹಾಗೆ ಎಲ್ಲಿ ಬೇಕಾದರೂ ಕುಳಿತುಕೊಂಡು ಮಾತನಾಡಬಹುದೇ? ಅವರು ಕುಳಿತಿರಬೇಕಾದುದು ಅವರ ಸ್ಥಳ ಅಲ್ಲಿ. ತಾವು ದಯವಿಟ್ಟು ಹೇಳಿ ಬೇರೆಕಡೆ, ಕುಳಿತುಕೊಂಡು ಅವರು ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಸರಿಯಲ್ಲ. ಅಲ್ಲಿ ಕುಳಿತುಕೊಂಡು ಎಲ್ಲರಿಗೂ ಪ್ರೋತ್ಸಾಹ ಕೊಟ್ಟು, ಪ್ರತಿಯೊಬ್ಬರಿಗೂ ನೀವು ಮಾತನಾಡಿ, ಮಾತನಾಡಿ ಎಂದು ಚಿತಾವಣೆ ಮಾಡತಕ್ಕದ್ದು ಸರಿಯಲ್ಲ. ಕಾಗೋಡು ತಿಮ್ಮಪ್ಪನವರಿಗೆ ಮಾತನಾಡತಕ್ಕ ಉತ್ಸಾಹ ಇದ್ದರೆ ಅವರು ದಯವಿಟ್ಟು ಇಲ್ಲಿಗೆ ಬರಬಹುದು. ಅಧ್ಯಕ್ಷರೇ ತಾವು ಅವರಿಗೆ ಹೇಳಿ.

ಅಧ್ಯಕ್ಷರು.—ಯಾರೂ ಮಧ್ಯೆ ಮಧ್ಯೆ ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಒಂದು ಸ್ಪಷ್ಟೀಕರಣ ಮಾನ್ಯ ಮುಖ್ಯ ಮಂತ್ರಿಗಳಿಂದ ಕೇಳಬಯಸುತ್ತೇನೆ. ಇದು ಪ್ರಾಮುಖ್ಯವಾದ ಸಮಸ್ಯೆ.

ಅಧ್ಯಕ್ಷರು.—ನಿಮ್ಮ ಹೆಸರು ಇಲ್ಲಿ ಇಲ್ಲ. ಯಾವುದೇ ಸಮಸ್ಯೆ ಆಗಿದ್ದರೂ ಕೂಡಾ, ಪ್ರಾಮುಖ್ಯವಾದ ಸಮಸ್ಯೆಯೇ ಆಗಲಿ, ಅಪ್ರಾಮುಖ್ಯವಾದ ಸಮಸ್ಯೆಯೇ ಆಗಲಿ, ತಮ್ಮ ಹೆಸರನ್ನು ಅಲ್ಲಿ ದಾಖಲು ಮಾಡಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಇಲ್ಲಿಂದ ತಮ್ಮ ಗಮನ ಸೆಳೆದಿದ್ದೇನೆ. ಅದರಲ್ಲಿ ಹೆಸರು ಬರೆದಿರುವುದಿಲ್ಲ. ಇಲ್ಲಿಂದಲೇ ಗಮನ ಸೆಳೆದಿದ್ದೇನೆ. ಆವರದ್ದು ಆದನಂತರ ಒಂದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇನ್ನು ಮೇಲೆ ವ್ಯವಸ್ಥಿತವಾಗಿ ಹೋಗೋಣ. ಗಮನ ಸೆಳೆಯಲು ಬೇಕಾದರೆ, ಪೂರ್ವವಾಗಿಯಾಗಿ ಸದಸ್ಯರುಗಳನ್ನು ಸಿದ್ಧತೆಗಳು ಮಾಡಿಕೊಂಡು ನಿಮ್ಮ ಹೆಸರು ದಾಖಲು ಮಾಡಿಸಿಕೊಂಡರೆ ಗಮನ ಸೆಳೆಯಲಂಬುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಆಗುವುದಿಲ್ಲ.

೧೧–೩೦ ಎ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಏನೆಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಹಾಗೂ ತಾಲ್ಲೂಕು ನ್ಯಾಯ ಪಂಚಾಯತ್ ಆಕ್ಟ್ ೧೯೮೩ರಲ್ಲಿ ಈ ರೀತಿ ಇದೆ.

"Section 285 of the Zilla Parishad & Mandal Panchayat and Nyaya Panchayat Act 1983:

285 : A Zilla Parishad may subject to the provisions of this Act and the rules made under Section 284 and with the previous sanction of the Government, by notification, make regulations to carry out the purpose of this Act in so far as..."

SRI B. BASAVALINGAPPA.—There is an amendment to it. I will read the amendment to that Section.

"**Amendment 19** :—Amendment to Section 285 :

In Section 285 of the principal act, the following proviso shall be inserted at the end, 'viz., "Provided that until provisions in that behalf are made under this Act by the Zilla Parishad or Mandal Panchayat as the case may be, it shall be competent for the Government to make by order appropriate provisions to regulate the recruitment and conditions of services of the persons appointed to the services and posts under ZPs and Mandal Panchayats and the initial appointments to such service and posts may also be made by the Government."

ಶ್ರೀ ಡಿ.ಬಿ. ಚಂದ್ರೇಗೌಡ.—ಅದಕ್ಕಾಗಿ ನಾನು ಹೇಳಿದೆ, ಗೌರವಧನ ಉಪಾಧ್ಯಾಯರ ನೇಮಕ ಶಿಕ್ಷಣ ಇಲಾಖೆಗೆ ತಿಳಿದಿರುತ್ತದೆ. ಈ ನೇಮಕಾತಿಗಳು ಪರ್ಮನೆಂಟ್ ನೇಮಕಾತಿಗಳೇನೂ ಅಲ್ಲ. ಇವು ತಾತ್ಕಾಲಿಕವಾದ, ಪರಿಸ್ಥಿತಿಗೆ ಅನುಗುಣವಾದ, ವಿದ್ಯಾಭ್ಯಾಸದ ಪ್ರಗತಿಗೆ ಅನುಗುಣವಾಗಿ ತಮ್ಮ ವ್ಯಾಪ್ತಿಯಲ್ಲಿ ಜಿಲ್ಲಾ ಪರಿಷತ್‌ನವರು ನಿಯಮ ೨೮೫ರ ಪ್ರತಿಯಿಂದ ಈ ನೇಮಕಾತಿಯನ್ನು ಮಾಡಿಕೊಂಡಿದ್ದಾರೆ.

ಒಂದು ವೇಳೆ ತಮ್ಮ ಡೈರೆಕ್ಷನ್ ಅನ್ನು ಜಿಲ್ಲಾ ಪರಿಷತ್ತಿನವರು ಮಾನ್ಯತೆ ಮಾಡದಿದ್ದರೆ ನಿಮ್ಮ ಸ್ಥಿತಿ ಏನು ? ಅದಕ್ಕೆ ತಾವೇನು ಆಲೋಚನೆ ಮಾಡಿದ್ದೀರಿ. ತಾವು ಈ ಡೈರೆಕ್ಷನ್ಸ್ ಕೊಡುವುದಕ್ಕಿಂತ ಮುಂಚೆ If all your directions are flouted by the Zilla parishads what is your position. I would like to know that. ಎರಡನೆಯದಾಗಿ ತತ್‌ಕ್ಷಣ ಜನವರಿ ಫೆಬ್ರವರಿಯಲ್ಲಿ ಪರೀಕ್ಷೆಗಳು ಕಾಲ. ಒಂದು ವೇಳೆ ನಿಮ್ಮ ಡೈರೆಕ್ಷನ್ಸ್ ಅನ್ನು ಜಿಲ್ಲಾ ಪರಿಷತ್ತಿನವರು ಫಾಲೋ ಮಾಡಿದರೆ ತಾವು ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ ? ಜಿಲ್ಲಾ ಪರಿಷತ್‌ನ ಶಾಸನಕ್ಕೆ ಅನುಗುಣವಾಗಿ ಅವರಿಗೆ ಬೇಕಾಗುವಂತಹ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಯಾವಾಗ ಮಾಡುತ್ತೀರಿ? ಹಾಗೆ ಮಾಡದಿದ್ದರೆ ಜಿಲ್ಲಾ ಪರಿಷತ್ ತತ್‌ಕ್ಷಣ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವಂತಹ ಶಾಲೆಗಳನ್ನು ನಡೆಸುವುದಕ್ಕೆ ನಿಮ್ಮ ಮಾರ್ಗದರ್ಶನ, ಸಲಹೆ ಸೂಚನೆಗಳೇನು ? ಜಿಲ್ಲಾ ಪರಿಷತ್ತು ಈ ನೇಮಕಾತಿಗಳನ್ನು ತನ್ನ ಆರ್ಥಿಕ ವ್ಯವಸ್ಥೆಯ ಒಳಗಡೆ ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್ಸ್‌ನಲ್ಲಿ ಮಾಡಿಕೊಂಡಿರುವುದರಿಂದ ಈ ಒಂದು ನೇಮಕಾತಿಗಳು ಸರ್ಕಾರಕ್ಕೆ ಹೊರೆ ಬೀಳುವುದಿಲ್ಲವೆನ್ನುವುದು ಗೊತ್ತಿದೆಯೇ ? ಗೊತ್ತಿದ್ದರೆ ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಯಲ್ಲಿ ನಾನ್ ಪ್ಲಾನ್ಡ್ ಎಕ್ಸ್‌ಪೆಂಡೀಚರ್ಸ್‌ನಲ್ಲಿ ಖರ್ಚು ಮಾಡತಕ್ಕಂಥ ಹಣವನ್ನು ಅವರು ಖರ್ಚು ಮಾಡುವುದು ಅಪರಾಧವೇ ? ಒಂದು ವೇಳೆ ಅಪರಾಧವಾದರೆ ರಿಕ್ರೂಟ್‌ಮೆಂಟ್ ಪಾಲಿಸಿ ಮಾಡಬೇಕಾಗುತ್ತದೆ. ಉಳಿದ ಕೆಲಸಕಾರ್ಯಗಳಿಗೆ ಜಿಲ್ಲಾ ಪರಿಷತ್ತಿನವರು ನಾನ್ ಪ್ಲಾನ್ಡ್ ಎಕ್ಸ್‌ಪೆಂಡೀಚರ್ಸ್‌ನಲ್ಲಿ ಖರ್ಚು ಮಾಡುತ್ತಿಲ್ಲವೇ ? ಉದಾಹರಣೆಗೆ ಹೇಳುವುದಾದರೆ ತಲಾನಂಧಾನದಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಹಣ ಬರುತ್ತದೆ. ಈ ಹಣವನ್ನು ಖರ್ಚು ಮಾಡುವಾಗ ವಿಶೇಷವಾದ ಸಾರ್ವಜನಿಕ ಉದ್ದೇಶಕ್ಕಾಗಿ ಅದೂ ವಿದ್ಯಾಭ್ಯಾಸಕ್ಕೆ ಅಗತ್ಯವಾದ ನೇಮಕಾತಿಗಳನ್ನು ಮಾಡಿದ್ದುದು ತಪ್ಪೆ ? ಒಂದು ವೇಳೆ ತಪ್ಪಾದರೆ ಶಾಶ್ವತವಾದ ರಿಕ್ರೂಟ್‌ಮೆಂಟ್ಸ್ ಮಾಡುವಾಗ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಎನ್ನುವುದನ್ನು ನಾವು ಮನಗಂಡಿದ್ದೇವೆ, ಆದರೆ ಇದು ಕೇವಲ ತಾತ್ಕಾಲಿಕ ದೃಷ್ಟಿಯಿಂದ ಸಾರ್ವಜನಿಕ ಕೆಲಸಕ್ಕೆ ಜನರ ಹಿತಕ್ಕೆ ಪೂರಾದುದಂಥಾದ್ದು. ಇದಕ್ಕೆ ಸರ್ಕಾರ ಮೊದಲೇ ಅಡ್ಡಿ ಮಾಡಿದುದು ಸರಿಯೇ? ಅದು ಯಾರು ಮಾಡಿದ್ದಾರೆ ? ಬಹಳ ವರ್ಷಗಳ ಕಾಲ ಗ್ರಾಮೀಣಾಭಿವೃದ್ಧಿ ಬಗ್ಗೆ, social inequalities ಬಗ್ಗೆ ಸಮರ ಕೊಂದಿದ್ದ ಮಾನ್ಯ ಬಸವಲಿಂಗಪ್ಪನವರ ಕೈಯಲ್ಲಿ ಈ ಕೆಲಸ ಮಾಡಿಸಿದ್ದಾರೆ. ನಿಮ್ಮಿಂದ ಈ ಕೆಲಸ ಆಗಬಾರದಾಗಿತ್ತು, ಸಂವಿಧಾನಕ್ಕೆ ಉಲ್ಲಂಘನೆಯಾಗುತ್ತದೆಂದು ಹೇಳುತ್ತಾ ಹೇಳುತ್ತಾ ೪ ದಶಕಗಳು, ೩ ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ವಿದ್ಯಾಭ್ಯಾಸಕ್ಕೆ ಆದ್ಯತೆ ಕೊಡಬೇಕೆನ್ನುವ ಸದುದ್ದೇಶದಿಂದ ಒಳ್ಳೆಯ ಕೆಲಸ ಮಾಡುವುದಕ್ಕೆ ನಿಮ್ಮದು ಅಡ್ಡಿ ಏಕೆ ? ದಯವಿಟ್ಟು ಈ ವಿಚಾರದಲ್ಲಿ ತಾವು ಬೆಳಕು ಚೆಲ್ಲಬೇಕು. ಆದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ತಕ್ಕಂಥ ಸುಮಾರು ೨೧ ಸಾವಿರ ಹುದ್ದೆಗಳು ಖಾಲಿ ಇವೆ, ಇವುಗಳನ್ನು ಯಾವಾಗ ಭರ್ತಿ

ಮಾಡುತ್ತೀರಿ ? ೧:೪೦ ರೇಶಿಯೋವನ್ನು ಯಾವಾಗ ಮೇನ್‌ಟೇನ್ ಮಾಡುತ್ತೀರಿ ? ಜಿಲ್ಲಾ ಪರಿಷತ್ತುಗಳೆ ರಾಜೀನಾಮೆಯನ್ನು ಕೇಳುವ ಹಿನ್ನೆಲೆಯಲ್ಲಿ ಮತ್ತು ಈಗ ನೀವು ಕೊಟ್ಟಿರತಕ್ಕ ಡೈರಕ್ಷನ್‌ನನ್ನು ಎರಡನ್ನೂ ಹೋಲಿಸಿ ನೋಡಿದರೆ, ಇದರಲ್ಲಿ ನಿಮ್ಮ ಉದ್ದೇಶ ಏನು ? ಏನಾದರೂ ದಳ್ಳಾಳಿ ಮಾಡುವ ವ್ಯವಸ್ಥೆ ಇದೆಯೇ ? ಅದಕ್ಕೆ ಇವೆಲ್ಲವನ್ನೂ ಮಾಡುತ್ತೀರೋ ಏನೋ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ,

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಆ ವಿಷಯಕ್ಕೆ ನಾನೂ ಸಿಗ್ನೇಟರಿಯಾಗಿದ್ದೇನೆ. ನಾನೂ ಕೆಲವು ವಿಷಯಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ Given that there are 8.45 lakh persons with qualifications of SSLC and above on the live registers of employment exchanges in the State, their rights need to be protected ಎನ್ನತಕ್ಕಂಥ ಮಾತನ್ನು ಹೇಳಿ. ಮೂರು ಸಾವಿರ ಜನಕ್ಕೆ ಒಂದು ರೀತಿಯ ಉದ್ಯೋಗ ಏನಿತ್ತು, ಅವರ ಹೊಟ್ಟೆ ತುಂಬಲಿಕ್ಕೆ ಅವಕಾಶ ಏನಿತ್ತು ಅದನ್ನು ತಪ್ಪಿಸಿ ಅವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆಯನ್ನು ಹಾಕತಕ್ಕಂಥ ಕೆಲಸವನ್ನು ಮಾನ್ಯ ಮಂತ್ರಿಯವರು, ಅದರಲ್ಲೂ ಇವರ ಸರ್ಕಾರದ ಮೊದಲನೆಯ ಸಚಿವ ಸಂಪುಟದ ಸಭೆಯಲ್ಲಿ ಮಾಡಿರತಕ್ಕ ತೀರ್ಮಾನದ ಉದ್ದೇಶ ನಮಗೆ ಅರ್ಥವಾಗುತ್ತಿಲ್ಲ. ಜಿಲ್ಲಾ ಪರಿಷತ್ತುಗಳಿಗೆ ಇವೊತ್ತು ವಾಸ್ತವಿಕವಾಗಿ ಏನಾಗುತ್ತಿದೆ ಎನ್ನುವುದರ ಬಗ್ಗೆ ವಿಚಾರ ಮಾಡಲಿಕ್ಕೆ ನಾನು ಬಯಸುತ್ತೇನೆ. ಬಹಳ ಮುಖ್ಯವಾಗಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ವ್ಯವಸ್ಥೆ ಬಂದ ಮೇಲೆ ಅನೇಕ ಹಳ್ಳಿಗಳಲ್ಲಿ ಎಲ್ಲಿ ಪಡಸಾಲೆಗಳ ಮೇಲೆ ಶಾಲೆಗಳನ್ನು ಮಾಡುತ್ತಿದ್ದರೋ ಎಲ್ಲೆಲ್ಲಿ ಶಿಲೆಗಳು ಇರಲಿಲ್ಲವೋ ಅಂಥ ಕಡೆಗಳಲ್ಲೆಲ್ಲಾ ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿ ಶಾಲೆಗಳನ್ನು ನಡೆಸಲಾಗುತ್ತಿದೆ. ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾಪರಿಷತ್ತುಗಳು ಬಂದ ಮೇಲೆ ಅನೇಕ ಏಕ ಉಪಾಧ್ಯಾಯ ಶಾಲೆಗಳನ್ನು ಪ್ರಾರಂಭ ಮಾಡಿರುವುದು ವಾಸ್ತವಾಂಶ. ಮಾನ್ಯ ಅಧ್ಯಕ್ಷರೆ, ತಾವು ಕೂಡ ಹಳ್ಳಿಗಾಡು ಪ್ರದೇಶದಿಂದ ಬಂದಿರತಕ್ಕವರು. ಆ ವಿಷಯ ತಮಗೂ ಗೊತ್ತಾಗಿದೆ.

ಶ್ರೀ ಎಂ. ರಾಮಪ್ಪ.— ಸಿಟಿಗಳ ಕಡೆ ಏನು ಮಾಡಿದ್ದಾರೆಂದು ಕೇಳಿ ? ಆಗ ಗೊತ್ತಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅದನ್ನು ನಿಮ್ಮ ಮಂತ್ರಿಗಳನ್ನೇ ಕೇಳಿ ಅವರೇ ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ರಾಮಪ್ಪನವರು ವಿರೋಧ ಪಕ್ಷದಲ್ಲಿ ಇರುವ ರೀತಿಯಲ್ಲೇ ಮಾತನಾಡುತ್ತಿದ್ದಾರೆ.

ಶ್ರೀ ಎಂ. ರಾಮಪ್ಪ.— ನಿಮ್ಮ ಸರ್ಕಾರ ಇದ್ದಾಗ ಏನು ಮಾಡಲಾಗಿತ್ತು ಎಂದು ಕೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ನನಗೂ ಗೊತ್ತು ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.— ನಿಮ್ಮ ಕೈಯಲ್ಲಿ ಕುಳಿತುಕೊಳ್ಳಿ ಎಂದು ಹೇಳಿಸಿಕೊಳ್ಳುವುದಕ್ಕೆ ನಾನು ಬಂದಿಲ್ಲ. ನಾನು ಅಧ್ಯಕ್ಷರಿಗೆ ಕೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಾನು ಯೀಲ್ಡ್ ಆಗಿಲ್ಲ.

ಶ್ರೀ ಎನ್. ಚಿಕ್ಕೇಗೌಡ.— ಸದಸ್ಯರುಗಳನ್ನು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನೀವು ಯಾರು ?

ಶ್ರೀ ಗೋಪಾಲಮುಕಂದ ಕಾನಡೆ.— ಕುಳಿತುಕೊಳ್ಳಿ ಎಂದು ಹೇಳುವುದು ಅವರಿಗೆ ರೂಡಿಯಾಗಿ ಬಿಟ್ಟಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನಿಮಗೆ ಹಳೆ ಅಭ್ಯಾಸ ಇನ್ನೂ ಹೋಗಿಲ್ಲ. ಸ್ಪೀಕರ್ ಅವರ ಅಪ್ಪಣೆ ಇಲ್ಲದೆ ಮಾತನಾಡುವ ಅಭ್ಯಾಸ ನಿಮಗೆ ಹೋಗಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡು ಪ್ರದೇಶಗಳಲ್ಲಿ ಸುಮಾರು ೪-೫ ಮೈಲಿಗಳಷ್ಟು ದೂರದ ಪ್ರದೇಶಗಳಲ್ಲಿ ಇರುವ ಶಾಲೆಗಳಿಗೆ ನಡೆದುಕೊಂಡು ಹೋಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯತಕ್ಕಂಥಾ ವಿಚಾರವು ತಮ್ಮ ಗಮನಕ್ಕೆ ಬಂದಿರತಕ್ಕಂಥಾ ವಿಚಾರವೇ ಆಗಿದೆ. ಆದರೆ ಮಂಡಲ ಪಂಚಾಯತ್ ಹಾಗೂ ಜಿಲ್ಲಾಪರಿಷತ್ ವ್ಯವಸ್ಥೆಯಾದ ಮೇಲೆ ಆ ವಿಚಾರ ವಾಗಿಸಾಕಷ್ಟು ಸುಧಾರಣೆಯಾಗಿದೆ. ೧-೨-೩ನೇ ತರಗತಿಗಳಿಗೆ ಸೇರಂಪ್ರ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ ಮತ್ತು ಮಧ್ಯೆ ಬಿಟ್ಟು ಹೋಗುವವರ ಸಂಖ್ಯೆಯೂ ಕಡಿಮೆಯಾಗಿದೆ. ಆ ವಿಚಾರಗಳನ್ನು ಅವಶ್ಯವೆನಿಸಿದಲ್ಲಿ ಅಂಕಿಅಂಶಗಳನ್ನು

ತರಿಸಿಕೊಂಡು ನೋಡಬಹುದು. ಹೀಗೆ ಶಾಲೆಗಳಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾದ ಪ್ರಕಾರ ಉಪಾಧ್ಯಾಯರ ಜೇಡಿಕೆಯೂ ತಾನಾಗಿಯೇ ಜಾಸ್ತಿಯಾಯಿತು. ಹೀಗಾಗಿ ಸಾಮಾನ್ಯವಾಗಿ ಎಲ್ಲಾ ಜಿಲ್ಲಾಪಂಚಾಯತ್ತಿನವರು ನೇಮಕವನ್ನು ಮಾಡಿಕೊಂಡಿದ್ದಾರೆ. ಆದರೆ ಮಾನ್ಯ ಸಚಿವರು ಸಾರಾಸಗಟಾಗಿ ನೇಮಕ ಮಾಡಿಕೊಂಡಿದ್ದಾರೆ. ರೋಸ್ಟರ್ ಪದ್ಧತಿಯನ್ನು ಅನುಸರಿಸಿಲ್ಲ ಎಂದು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಸಾರಾಸಗಟಾಗಿ ಎಲ್ಲಿಯೂ ನೇಮಕವಾಗಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿಯೂ ರೋಸ್ಟರ್ ಪದ್ಧತಿಗನುಗುಣವಾಗಿಯೇ ನೇಮಕವಾಗಿದೆ. ಇನ್ನೊಂದು ವಿಚಾರವನ್ನು ಮಾನ್ಯರು ಹೇಳಿದ್ದಾರೆ ಏನೆಂದರೆ " Zilla Parishads and Mandal Panchayats shall not make recruitments or appointments of any categories of officials " ಎನ್ನುತ್ತಕ್ಕಂಥ ಮಾತನ್ನು ಹೇಳಿದ್ದಾರೆ. ವಾಸ್ತವವಾಗಿ ವಿಚಾರ ಏನಿದೆ ಎಂದು ಹೇಳಿಬಿಡುವುದಾದರೆ ಮಂಡಳ ಪಂಚಾಯತ್‌ಗಳಲ್ಲಿ ಕಂದಾಯ ವಸೂಲು ಮಾಡುವಂಥ, ತೆರಿಗೆ ವಸೂಲು ಮಾಡುವಂಥ ಕೆಲಸವನ್ನು ಅಲ್ಲಿಯ ಸೆಕ್ರೆಟರಿಯೊಬ್ಬರೇ ಮಾಡುವುದಕ್ಕೆ ಆಗುವುದಿಲ್ಲ. ಅಥವಾ ಅಲ್ಲಿಯ ಸದಸ್ಯರು ಕೂಡ ಮಾಡುವುದಕ್ಕೆ ಬರುವುದಿಲ್ಲ. ಆ ಕಾರಣಗಳಿಗಾಗಿ ಅನೇಕ ಕಡೆಗಳಲ್ಲಿ ಬಿಲ್ ಕಲೆಕ್ಟರ್ ಎಂದು ಮಂಡಳ ಪಂಚಾಯತ್‌ನವರು ನೇಮಕ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಸಚಿವರು ತಮ್ಮ ಹೇಳಿಕೆಯಲ್ಲಿ ಎನನ್ನೂ ಹೇಳಿಕೊಂಡಿಲ್ಲ. ಹಾಗೆಯೇ ಸರಕಾರ ಏನಾದರೂ ಡೈರೆಕ್ಷನ್ಸ್‌ನ್ನು ಮಂಡಳ ಪಂಚಾಯತ್‌ಗಳಿಗೆ ಕೊಟ್ಟಲ್ಲಿ ಅವರು ಫಂಕ್ಷನ್ ಮಾಡುವುದು ಕಷ್ಟವಾಗುತ್ತದೆ. ಅನೇಕ ಮಂಡಲಗಳಲ್ಲಿ ಸುಮಾರು ೧ ರಿಂದ ೨ ಲಕ್ಷ ರೂಪಾಯಿಗಳಷ್ಟು ವಸೂಲಾತಿಯೂ ಇರುತ್ತದೆ. ಹೀಗೆ ಏನಾದರೂ ಡೈರೆಕ್ಷನ್ಸ್ ಕೊಟ್ಟು ಬಿಲ್ ಕಲೆಕ್ಟರ್‌ನ್ನು ನೇಮಕ ಮಾಡಬಾರದು ಎಂದರೆ ಹಣವನ್ನು ಯಾರು ವಸೂಲು ಮಾಡುವುದು ಎಂಬ ಪ್ರಶ್ನೆ ಬರುತ್ತದೆ. ಆದುದರಿಂದ ಸರಕಾರ ಈ ದಿಸೆಯಲ್ಲಿ ಏನು ಡೈರೆಕ್ಷನ್ಸ್ ಕೊಡಬೇಕೆಂದು ಯೋಚನೆ ಮಾಡಿದ್ದಾರೆ ಎಂದು ಹೇಳಬೇಕಾಗಿದೆ ಮಂತ್ರಿ ಹಾಗೇನಾದರೂ ಇದ್ದರೆ ಅದನ್ನು ಪುನರ್‌ಪರಿಶೀಲನೆ ಮಾಡತಕ್ಕಂಥಾದ್ದು ಸೂಕ್ತ ಎಂದು ಸರಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ ಹಿಂದೆ ನೀವು ಸ್ಪೆಷಲ್ ಪಂಡರಿ ಗ್ರಾಜ್ಯುಯೇಟ್‌ಗಳನ್ನು ರೆಕ್ರೂಟ್ ಮೆಂಟ್ ಮಾಡಿಕೊಂಡಿದ್ದಾರೆ ನಿಮ್ಮ ಪಕ್ಷದವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸ್ಪೆಷಲ್ ಪಂಡರಿ ಗ್ರಾಜ್ಯುಯೇಟ್‌ಗಳನ್ನೆಲ್ಲಾ ಖಾಯಂಗೊಳಿಸುತ್ತೇವೆ ಎಂದು ಹೇಳಿಕೊಂಡು ತುಲಾಭಾರ ಮಾಡಿಸಿಕೊಂಡಿದ್ದಾರೆ, ಕತ್ತಿ, ಗದೆ ಚೂರಿ ಮುಂತಾದವುಗಳನ್ನು ಕೊಡಿಸಿಕೊಂಡಿದ್ದಾರೆ. ಆದರೆ ನಮ್ಮ ಈಗಿನ ಮುಖ್ಯಮಂತ್ರಿಗಳು ತುಂಬಾ ಅನುಭವಸ್ಥರು, ಜೊತೆಗೆ ಗ್ರಾಮಾಂತರ ಪ್ರದೇಶದ ಜನತೆಯ ಬಗ್ಗೆ ಬಹಳಷ್ಟು ಅನುಕಂಪವುಳ್ಳವರು, ಬಡವರ ಬಗ್ಗೆ ದಯೆವುಳ್ಳವರು, ಹೀಗೆ ಉಪಾಧ್ಯಾಯರ ನೇಮಕಾತಿ ಬಗ್ಗೆ ಅನ್ಯಾಯ ಮಾಡಬೇಕೆಂದು ಮನಸ್ಸುಳ್ಳವರಲ್ಲ ಎಂದು ನಾನು ಭಾವಿಸುತ್ತೇನೆ. ಆಥವಾ ಹೀಗೆಲ್ಲಾ ಹೇಳಿ ಅವರಿಂದ ತುಲಾಭಾರವನ್ನು ಮಾಡಿಸಿಕೊಳ್ಳಲು ಬಯಸಿದ್ದಾರೋ ಏನೋ ಗೊತ್ತಾಗುತ್ತಿಲ್ಲ.

ಬೆಳ್ಳಿಗದೆಗಳನ್ನು ಮತ್ತೆಪಡೆಯೋಣ ಅನಂತರ ಖಾಯಂ ಮಾಡೋಣ ಎಂದು ಈ ಕೆಲಸ ಆಕ್ರಮ ವೆಂದು ಸಾರಿದ್ದೀರೋ. ಏನೋ ?

ಶ್ರೀ ವಾಟಾಳ್ ನಾಗರಾಜ್.— ಹೆಗಡೆಯವರ ಕಾಲು ತೊಳೆದಿರೋ ಜನ ಇವರು, ಇವತ್ತು ದೊಡ್ಡದಾಗಿ ಮಾತಾಡುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸ್ವಾಮಿ ಆ ಮಾತು ಹಿಂದಕ್ಕೆ ತೆಗೆದುಕೊಳ್ಳಬೇಕು, ಯಾರಂ ಹೆಗಡೆಯವರ ಕಾಲು ತೊಳೆದಿದ್ದಾರೆ ಹೇಳಬೇಕು, ಎಲ್ಲಿ ತೊಳೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ನಿಮ್ಮ ಕನಕಪುರದಲ್ಲಿ, ಸಂಯುಂಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ, ಓದಿಕೊಳ್ಳಿ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೇ, ಬೆಳ್ಳಿಗದೆ ಚೂರಿ ವಿಷಯ ಮಾತನಾಡುವಾಗ ವೀರಪ್ಪ ಮೊಯಿಲಿ ಖಿರ್ಗೆಯವರೆಲ್ಲ ಸುಮ್ಮನೇ ಕುಳಿತಿದ್ದಾರೆ, ಆದರೆ ಈ ವಾಟಾಳ್ ನಾಗರಾಜ್‌ಗೆ ಹುಳಿಯಾಗುತ್ತಿದೆ ಏಕೆಂದರೆ ಇವರ ಮುಖ್ಯಮಂತ್ರಿಗಳಿಗೆ ಬೆಳ್ಳಿ ಗದೆ ಖಾಕಾ ಚೂರಿ ಕೊಡುವಾಗ ಇವರು ಅವರ ಮಧ್ಯೆ ಇದ್ದರು.

ಶ್ರೀ ವಾಟಾಳ್ ನಾಗರಾಜ್.— ನಾವು ಚೂರಿ ಕೊಡಿಸಿರಬಹುದು, ಆದರೆ ಸಿಂಧ್ಯಾರಂತೆ ಯಾರಿಗೂ ಬೆನ್ನಿನಲ್ಲಿ ಚೂರಿ ಹಾಕಿಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.--ಆದ್ದರಿಂದ ಮಾನ್ಯ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ತಮ್ಮ ಈ ಕ್ರಮದಿಂದ ಮಂಡಲ ಪಂಚಾಯಿತಿಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಆದರಲ್ಲೂ ಇನ್ನು ಮೂರು ತಿಂಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಾಗಬೇಕು, ವಿಶೇಷತಃ ಸಿಂಗಲ್ ಟೀಚರ್ ಶಾಲೆಗಳು ಏನಾಗಬೇಕು ? ಇದರ ಬಗ್ಗೆ ಯೋಚನೆ ಮಾಡಿ. ಕಾನೂನು ಬಾಹಿರವಾಗಿ ನಾವು ಮೂರು ಸಾವಿರ ಶಿಕ್ಷಕರನ್ನು ನೇಮಿಸಿಕೊಂಡೆವು ಎಂದು ಹೇಳಿ ಅವರನ್ನು ತೆಗೆದು ಹಾಕುವುದು ಅನ್ಯಾಯ, ಅದರಿಂದ ನೀವು ಪ್ರಚಾರ ಪಡೆಯಬೇಕೆಂದುಕೊಂಡಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಪರ್ಯಾಯವಾದ ಉಪಾಯಂಗೊಳಿಸುವ ವ್ಯವಸ್ಥೆಯನ್ನು ತಕ್ಷಣ ಮಾಡಿ. ರೋಸ್ಟರ್ ಸಿಸ್ಟಮ್ ಏನಿದೆ ಅದನ್ನು ಅಡಾಪ್ಟ್ ಮಾಡಿಕೊಂಡಿರುವ ಉದಾಹರಣೆಗಳು ಹಿಂದೆ ಇವೆ. ಆದ್ದರಿಂದ ಸರ್ಕಾರ ತನ್ನ ನಿರ್ಧಾರವನ್ನು ಬದಲಾಯಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.--ನಾನು ಭಾಷಣ ಮಾಡಲು ಹೋಗುವುದಿಲ್ಲ. ಜಿಲ್ಲಾ ಪರಿಷತ್ ಆಕ್ಟ್ ೧೯೨೯ ಪ್ರಕಾರ ಪ್ರೈಮರಿ ಮತ್ತು ಸೆಕೆಂಡರಿ ಎರಡೂ ವಿದ್ಯಾಭ್ಯಾಸದ ಹಂತ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿವೆ. ಇದರ ಬಗ್ಗೆ ಯಾವುದೇ ವಿವಾದ ಇರಲಿಕ್ಕೆ ಸಾಧ್ಯವಿಲ್ಲ. ಆ ಶಿಕ್ಷಕರ ನೇಮಕಾತಿ ಯಾಗಲೀ ಅವರ ಮೇಂಟೆನೆನ್ಸ್‌ಗಳಲೀ ಇದು ಜಿಲ್ಲಾ ಪರಿಷತ್‌ಗಳ ಜವಾಬ್ದಾರಿ. ವಿಶೇಷತಃ ಮಲೆನಾಡು ಭಾಗಗಳಲ್ಲಿ ೩೦, ೪೦, ೫೦, ವಿದ್ಯಾರ್ಥಿಗಳಿಗೂ ಒಬ್ಬನಂತೆ ಶಿಕ್ಷಕರಿಲ್ಲ. ಜಿಲ್ಲಾಪರಿಷತ್‌ಗಳನ್ನು ರಚಿಸಿದ ಮೂಲ ಉದ್ದೇಶವೇನೆಂದರೆ ಅಧಿಕಾರ ವಿಕೇಂದ್ರೀಕರಣವಾಗಿ ಪ್ರತಿನಿಧಿಗಳು ಜನರ ಮಧ್ಯೆ ಇದ್ದು ಆ ಭಾಗದ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹಾರ ಮಾಡಲಿಕ್ಕೆ ಪ್ರಯತ್ನಿಸುವುದು. ಇದರ ಅರ್ಥ ಶಾಸಕರು ಹಿಂದೆ ಜನಗಳು ಮಧ್ಯೆ ಇರಲಿಲ್ಲವೆಂದಲ್ಲ. ಇವತ್ತು ಜಿಲ್ಲಾ ಪರಿಷತ್ ಸದಸ್ಯರಾಗಲೀ ಮಂಡಲ ಪಂಚಾಯಿತಿ ಸದಸ್ಯರಾಗಲೀ ಆ ಭಾಗದ ಸಮಸ್ಯೆಗಳನ್ನು ತಿಳಿದುಕೊಂಡು ಸಾಕಷ್ಟು ಕಡೆ ಸ್ಕೂಲ್‌ಗಳ ಬ್ರಾಂಚ್‌ಗಳನ್ನು ಶುರು ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೋ ತಾಂತ್ರಿಕ ನೆಪವೊಡ್ಡಿ ಮೂರು ಸಾವಿರ ಶಿಕ್ಷಕರನ್ನು ತೆಗೆಯಬೇಕೆಂದು ನಿರ್ಣಯಿಸಿರುವುದು ಶಿಕ್ಷಣ ವ್ಯವಸ್ಥೆ ಮೇಲೆ ಗಧಾಪ್ರಹಾರದಂತೆ ಮಾಡಿದಂತಾಗಿದೆ. ಕೇವಲ ೩ ಸಾವಿರ ಶಿಕ್ಷಕರ ಪ್ರಶ್ನೆ ಇದಲ್ಲ. ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನು ? ಮಾರ್ಚಿಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಎರಡನೆಯ ಪ್ರಶ್ನೆ, ಹಣಕಾಸಿನ ದೃಷ್ಟಿಯಿಂದ ಸರ್ಕಾರದ ಮೇಲೆ ಯಾವ ಬರ್ಡನ್ನೂ ಆಗುವುದಿಲ್ಲ. ವಿರೋಧ-ಪಕ್ಷದ ನಾಯಕರು ಹೇಳಿದಹಾಗೆ ಆ ಶಿಕ್ಷಕರಿಗೆ ೩೦೦ ರಿಂದ ೪೦೦ ಸಂಬಳ ಕೊಡುತ್ತಿದ್ದಾರೆ ಅದೂ ಸಹ ಜಿಲ್ಲಾಪರಿಷತ್ ಮಂಡಲ ಪಂಚಾಯಿತಿಗಳ ಮೇಂಟೆನೆನ್ಸ್ ಬಾಬ್ತು ಆಗುತ್ತಿದೆ. ಯಾವುದೇ ಸರ್ಕಾರದ ಆದೇಶವಿಲ್ಲದೆ ಈ ರೀತಿ ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಮತ್ತೊಂದು ಮಾತನ್ನು ಹೇಳಿದರು. ಎಲ್ಲೆಲ್ಲಿ ಪೋಸ್ಟ್ ಇದೆಯೋ, ಸ್ಯಾಂಕ್ಷನ್ನಾಗಿದೆಯೋ ಅಲ್ಲೆಲ್ಲಾ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ. ಇನ್ನೂ ಆಡಿಷನಲ್ ಪೋಸ್ಟ್ ತೆಗೆದುಕೊಳ್ಳಬೇಕಾದರೆ ಅದಕ್ಕೆ ರೂಲ್ಸ್ ಆಗಿಲ್ಲ. ಆದ್ದರಿಂದ ಕಷ್ಟವಾಗುತ್ತಿದೆ. ಆದರೆ ಸ್ಯಾಂಕ್ಷನ್ನಾಗಿರುವ ಸ್ಥಳಗಳಲ್ಲಿ ಹಂಗಾಮಿಯಾಗಿ ನೇಮಿಸಿಕೊಂಡಿರುವವರನ್ನು ತೆಗೆಯಲು ಹೊರಟರೆ ಅದು ಗಧಾಪ್ರಹಾರದಂತೆ ಆದ್ದರಿಂದ ಸರ್ಕಾರ ಈ ಆಜ್ಞೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು

They have stated in the Statement, 'Government had issued a Circular No. RDP 83 PBV 88 dated 6/1/1989 advising the Zilla Parishads not to recruit the staff in this manner'. The Hon. Minister for Rural Development is here and he will answer. The briefing of Mr. M. Veerappa Moily has appeared in the Press. It reads thus:

> "Information Mr. M. Veerappa Moily who briefed the Reporters on Cabinet decisions said, the lapse on the part of the previous Government to issue necessary directives in this regard under the ZP Act had rendered these appointments irregular".

ಎಂದು ಮಾನ್ಯ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಆದರೆ ಇನ್ನೊಬ್ಬ ಸಚಿವರು ಪತ್ರಿಕಾ ಹೇಳಿಕೆ ನೀಡಿ ಯಾವ ತರಹದ ಆದೇಶವನ್ನೂ ಸರ್ಕಾರ ಕೊಟ್ಟಿಲ್ಲ, ಆದ್ದರಿಂದ ಆಗಿರುವ ಅಪಾಯಿಂಟ್‌ಮೆಂಟ್ ಸರಿಯಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಇವರಿಬ್ಬರಲ್ಲಿ ಯಾವುದು ಸರಿ ? ದಯವಿಟ್ಟು ಸರ್ಕಾರ ಉತ್ತರ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್ — ಅಧ್ಯಕ್ಷರೇ ಮಧ್ಯೆ ಪ್ರವೇಶ ಮಾಡುತ್ತೇನೆ. ಸಂಬಂಧಿಸಿದ ಸಚಿವರು ಆಮೇಲೆ ಉತ್ತರ ಕೊಡುತ್ತಾರೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದು ಕೇವಲ ಎರಡು ದಿವಸವಾದುವು. ಜಿಲ್ಲಾ ಪರಿಷತ್ತಿನವರು ಶಿಕ್ಷಕರನ್ನು ನೇಮಕ ಮಾಡಿದ್ದಾರೆ. ಅದನ್ನು ರದ್ದು ಮಾಡಿ ಕಾಂಗ್ರೆಸ್ ಸರ್ಕಾರ ಘೋರ ಅನ್ಯಾಯ ಮಾಡಿದಂತಾಗಿದೆ ಎಂಬ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನ ನಡೆದಿದ್ದಂತೆ ಕಾಣುತ್ತಿದೆ. ಒಂದು ನನ್ನ ಅನುಭವದ ವಿಚಾರ ಹೇಳುತ್ತೇನೆ ಹಿಂದಿನದೆಲ್ಲ ಹೇಳಿಯೂದಕ್ಕೆ ಹೊರಟರೆ ಕಷ್ಟವಾಗುತ್ತದೆ. ಅದನ್ನು ಕದಕಲು ನನಗಂತೂ ಇಷ್ಟವಿಲ್ಲ. ೧೯೮೬ರಲ್ಲಿ ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದಾಗ ನನ್ನ ಮತಕ್ಷೇತ್ರದ ಒಂದು ಹಳ್ಳಿ ಹೇರೂರಿಗೆ ಹೋಗಿದ್ದೆ. ಅಲ್ಲಿ ಮಿಡ್ಲ್ ಸ್ಕೂಲ್‌ವರೆಗೂ ಇದೆ. ೧೬೦ ಹುಡುಗರು. ಶಿಕ್ಷಕರು ಎಷ್ಟಿರಬೇಕು ? ಕೇವಲ ಒಬ್ಬ ಶಿಕ್ಷಕ. ಆ ಕಡೆ ಕಾಳಿತವರಿಗೆ ಹಿಂದಿನ ಸರ್ಕಾರ ಯಾವ್ಯಾರೀತಿ ನಡೆದುಕೊಂಡಿದೆ ಎಂದು. ನಾಚಿಕೆ ಬರಬೇಕಾಗುತ್ತದೆ, ಒಬ್ಬ ಶಿಕ್ಷಕ ೧೬೦ ಮಕ್ಕಳಿಗೆ ಬೋಧಿಸಲು ಸಾಧ್ಯವೇ ? ಅವನು ಒಂದು ಗಂಟೆ ನರ್ಸರಿ, ಒಂದು ಗಂಟೆ ಪ್ರೈಮರಿ ಒಂದು ಗಂಟೆ ಮಿಡ್ಲ್ ಸ್ಕೂಲ್ ಹೀಗೆ ತೆಗೆದುಕೊಳ್ಳುತ್ತಾ ಇದ್ದ. ನಾನು ಬಹಳ ಖಾರವಾದ ಪತ್ರವನ್ನು ವಿದ್ಯಾಸಚಿವರಿಗೆ ಬರೆದೆ. ಆಮೇಲೆ ಇನ್ನೊಬ್ಬ ಶಿಕ್ಷಕ ಅಲ್ಲಿಗೆ ಬಂದ ಇಂಥಾದ್ದನ್ನೆಲ್ಲಾ ಕೆದಕಂವುದಕ್ಕೆ ನಾನು ಹೋಗುವುದಿಲ್ಲ. ಜಿಲ್ಲಾ ಪರಿಷತ್‌ಗಳು ಇವತ್ತು ಏನು ನೇಮಕಾತಿ ಮಾಡಿಕೊಂಡಿವೆ ಅದರ ಬಗ್ಗೆಯೂ ಇಲ್ಲಿ ಹೋಗುವುದಿಲ್ಲ. ಅದರ ಪಾಪಕ್ಕೆ ಯಾರು ಯಾರು ಜವಾಬ್ದಾರರೋ ಅವರೇ ಅದನ್ನು ಅನುಭವಿಸಿಕೊಳ್ಳಲಿ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.—ಹಿಂದಿನಿಂದಲೂ ಹತ್ತು ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಒಂದು ಇಲಾಖೆಯಲ್ಲಿಳ ಜನರ ಕೆಲಸವನ್ನು ಒಬ್ಬ ಗುಮಾಸ್ತ ಮಾಡಬಹುದು ಅವನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ, ಪ್ರೈಮರಿ ಹೆಲ್ತ್ ಯೂನಿಟ್‌ಗಳಲ್ಲಿ ನರ್ಸ್‌ಗಳು ಇಲ್ಲ. ಕಾಂಪೌಂಡರ್‌ಗಳು ಇಲ್ಲ, ಹೈಸ್ಕೂಲ್ ವಿಭಾಗದ ಸ್ಕೂಲ್‌ಗಳಲ್ಲಿ, ಪ್ರೈಮರಿ ಸ್ಕೂಲ್‌ಗಳಲ್ಲಿ ಶಿಕ್ಷಕರು ಇಲ್ಲದೇ ಮಕ್ಕಳು ತಾವೇ ಓದಿಕೊಂಡು ಹೋಗ ತಕ್ಕಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ನಿಮ್ಮ ಜವಾಬ್ದಾರಿಯೂ ಇದೆ. ನಮ್ಮ ದೇಶದ ಮುಂದಿನ ಭವಿಷ್ಯದ ಶಿಲ್ಪಿಗಳನ್ನು ತಯಾರು ಮಾಡಬೇಕಾದರೆ ಮಕ್ಕಳಿಗೆ ಶಿಕ್ಷಣದ ತರಬೇತಿಯನ್ನು ಸರಿಯಾಗಿ ನೀಡಬೇಕು. ೧೫೦ ಜನ ಮಕ್ಕಳಿಗೆ ಒಬ್ಬ ಶಿಕ್ಷಕರು ಸಾಕಾಗುತ್ತವೆಯೇ? ಹಿಂದಿನ ಸರಕಾರದವರು ಇದರ ಬಗ್ಗೆ ಏನು ವಿಚಾರ ಮಾಡಿದರು? ಏಕೆ ಹತ್ತು ಸಾವಿರ ಹುದ್ದೆಗಳನ್ನು ಖಾಲಿ ಬಿಟ್ಟಿತು ಎಂಬುದನ್ನು ವಿಚಾರ ಮಾಡಬೇಕು. ಇದಕ್ಕೆ ಜಿಲ್ಲಾ ಪರಿಷತ್ತಿನವರು ಗುರಿಯಾಗಬೇಕಾಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಜಿಲ್ಲಾ ಪರಿಷತ್ತಿನವರು ಈ ಶಿಕ್ಷಕರಿಗೆ ಸಂಬಳ ಕೊಡುತ್ತಿದ್ದಾರೆಂದು ಎಷ್ಟು? ೨೫೦–೩೫೦ ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ ಇದು ಸಾಕೆ?

ಎಸ್ ಎಸ್ ಎಲ್ ಸಿ, ಪಿ ಯು ಸಿ, ಬಿ ಎ ಪಾಸ್ ಆಗಿರುವವ ೩ ಸಾವಿರ ಶಿಕ್ಷಕರು ಅಲ್ಲಿ ಕೆಲಸ ಮಾಡುತ್ತಿದ್ದು ಅವರ ಶೋಷಣೆಯಾಗುತ್ತಿದೆ. They are being exploited. ನಾವು ಇಷ್ಟು ಸಂಬಳದಲ್ಲಿ ದುಡಿಯುತ್ತಿದ್ದೇವೆ ನಮ್ಮನ್ನು ರೆಗ್ಯುಲರೈಸ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.— ಅವರಿಗೆ ಆರು ತಿಂಗಳಿನಿಂದ ಸಂಬಳ ಕೊಟ್ಟಿಲ್ಲ.

ಶ್ರೀ ವೀರೇಂದ್ರ ಪಾಟೀಲ್.— ಮಾನ್ಯ ವಿರೋಧ ಪಕ್ಷದ ನಾಯಕರು ಈ ಶಿಕ್ಷಕರು ೨೫೦–೩೫೦ ರೂಪಾಯಿ ತೆಗೆದುಕೊಂಡು ಏನು ಕೆಲಸ ಮಾಡುತ್ತಿದ್ದಾರೆ, ಇವರ ಬಗ್ಗೆ ಕೈ ಹಚ್ಚಬೇಡಿ ಎಂದು ಹೇಳುವುದಾದರೆ ಅವರು ಅಷ್ಟು ಸಂಬಳದಲ್ಲೇ ದುಡಿಯಬೇಕೆಂದು ಹೇಳಿದ ಹಾಗಾಯಿತು. ಅದಕ್ಕೆ ತಾವು ಒಪ್ಪುತ್ತೀರಾ ? ಮಿನಿಮಮ್ ವೇಜಸ್ ಆಕ್ಟ್‌ನಲ್ಲಿ As per Minimum Wages Act itself. the minimum wages is not less then Rs 12/- ಈ ರೀತಿ ಇದೆ. ಹಳ್ಳಿಯಲ್ಲಿ ದುಡಿಯುವವನಿಗೆ ೧೨ ರೂಪಾಯಿಗಳು ಸಿಗುತ್ತದೆ ಅಂಥಾದ್ದರಲ್ಲಿ ಎಸ್ ಎಸ್ ಎಲ್ ಸಿ, ಪಿ ಯು ಸಿ, ಬಿ ಎ ಪಾಸಾದವರು ೨೫೦–೩೫೦ ರೂಪಾಯಿಯಲ್ಲೇ ದುಡಿಯಬೇಕೆಂದು ಹೇಳುತ್ತೀರಾ? ಅವರು ನಮ್ಮನ್ನು ರೆಗ್ಯುಲರೈಸ್ ಮಾಡಬೇಕು ಎಂದು ಹೇಳುತ್ತಿದ್ದಾರೆ ಅದರ ಬಗ್ಗೆ ವಿಚಾರ ಮಾಡಬೇಕು. ಈಗ ಒಬ್ಬ ಶಿಕ್ಷಕ ಅಪಾಯಿಂಟ್ ಆದರೆ ಸಂಬಳ ೧೦೫೦ ಡಿ.ಎ. ೫೫೦ ಒಟ್ಟು ಸೇರಿ ೧೬೦೦ ರೂಪಾಯಿ ಬರುತ್ತದೆ. ಅಷ್ಟು ಸಂಬಳ ಪಡೆಯುವುದಕ್ಕೆ ಅರ್ಹತೆ ಇರುವಂಥ ವ್ಯಕ್ತಿಯು ತನ್ನ ಹೊಟ್ಟೆ ಹೊರೆಯುವುದಕ್ಕಾಗಿ ಬೇರೆ ಉದ್ಯೋಗ ಸಿಗದೇ ಇರುವಾಗ ೨೫೦–೩೫೦ ರೂಪಾಯಿ ಸಂಬಳ ಆದ್ದರೂ ಪಡೆಯೋಣವೆಂದು ಹೇಳಿ ಈ ಶಿಕ್ಷಕ ವೃತ್ತಿಯನ್ನು ಕೈಗೊಂಡಿರುತಕ್ಕಂಥಾದ್ದು ಇದೆ. ಜಿಲ್ಲಾ ಪರಿಷತ್ತಿನೊಂದಿಗೆ ಹೊಂದಿಕೊಂಡು ಈ ಪ್ರಕ್ರಿಯೆಯನ್ನು ಮಾಡಿಕೊಂಡು ಹೋಗುತ್ತಿದ್ದಾರೆ,

ಈ ಮಂಜೂರು ಸಾವಿರ ಶಿಕ್ಷಕರಿಗೆ ನಾವೇನೂ ಮಾಡಬಾರದೆಂದು ೨೫೦–೩೫೦ ರೂಪಾಯಿ ಸಂಬಳದಲ್ಲೇ ಅವರು ಮುಂದುವರಿಯಬೇಕುಎಂದು ಹೇಳುವುದು ಸರಿಯಲ್ಲ. ನಾವು ಈಗತಕ್ಷಣ ಏನಾದರೂ ಮಾಡಿದರೆ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಅಧಿಕಾರದಲ್ಲಿ ಮಧ್ಯ ಪ್ರವೇಶ ಮಾಡಿದಂತಾಗುತ್ತದೆ. ನಾವು ಅವರನ್ನು ಟರ್ಮಿನೇಟ್ ಮಾಡಿ ಎಂದು ಹೇಳಲಿಲ್ಲ ನಾವು ಅವರನ್ನು ಪಂಗಡಿ ಕಳಿಸಬಹುದು ಆದರೆ ನಾಳೆ ಹುಡುಗರಿಗೆ ಪಾಠ ಹೇಳಿಕೊಡುವವರು ಯಾರು? ನಮಗೂ ಮಕ್ಕಳು ಇದ್ದಾರೆ ಆ ಭಾಗದಲ್ಲಿ, ಈ ಭಾಗದಲ್ಲಿ ಕೂಡ ಪೇರೆಂಟ್ಸ್ ಇದ್ದಾರೆ. ಆ ಪೇರೆಂಟ್ಸ್‌ಗಳ ಮತ ಪಡೆದು ನಾವು ಇಲ್ಲಿಗೆ ಬಂದಿದ್ದೇವೆ. ಈ ಶಿಕ್ಷಕರ ಹುದ್ದೆಗಳನ್ನು ಯಾವ ರೀತಿ ಭರ್ತಿ ಮಾಡಬೇಕು ಎಂಬ ಬಗ್ಗೆ ಒಂದು ಪದ್ಧತಿಯನ್ನು ಮಾಡಬೇಕು ಮತ್ತು ಅದು ಹಾಗೆಯೇ ಮುಂದುವರಿಯಬೇಕೇ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಅವರನ್ನು ಟರ್ಮಿನೇಟ್ ಮಾಡಿ ಎಂದು ನಾವು ಹೇಳಲಿಲ್ಲ. ಕೊನೆಯ ಪ್ಯಾರಾದಲ್ಲಿ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ ಇವರ ನೇಮಕಾತಿ ಇರ್–ರೆಗ್ಯುಲರ್ ಆಗಿದೆ ಎಂದು ಆರು ಜಿಲ್ಲಾ ಪರಿಷತ್ತುಗಳ ಗಮನಕ್ಕೆ ತರಬೇಕು ಎಂದು ನಿರ್ಣಯ ಮಾಡಿಕೊಂಡಿದ್ದೇವೆಯೇ ಹೊರತಾಗಿ ಇವರನ್ನೆಲ್ಲಾ ತೆಗೆದುಹಾಕಿ ನಾಳೆಯಿಂದ ಇವರನ್ನು ಕೆಲಸಕ್ಕೆ ಬರಗೊಡಿಸಬೇಡಿ, ಶಿಕ್ಷಕರಾಗಿ ಇವರು ಕೆಲಸ ಮಾಡುತ್ತಿದಕ್ಕೆ ಅವಕಾಶ ಮಾಡಿಕೊಡಬೇಡಿ ಎಂಬ ಮಾತನ್ನು ನಾವು ಆಡಿಲ್ಲ. ಇಲ್ಲಿರುವ ಪ್ರಶ್ನೆ ಏನು? ಇದನ್ನು

೧೬–೦೦ ಮಧ್ಯಾಹ್ನ

ನಾವೆಲ್ಲರೂ ಕೂಡಿ ಬಗೆಹರಿಸಬೇಕು. ಏನೆಂದರೆ ಶಿಕ್ಷಕರು ಇಲ್ಲದೇ ಶಾಲೆಗಳನ್ನು ನಡೆಸಬೇಕೇ? ಹಿಂದೆ ಐದಾರು ವರ್ಷಗಳವರಿಗೆ ಶಿಕ್ಷಕರು ಇಲ್ಲದೇ ಶಾಲೆಗಳು ನಡೆದಿವೆ, ಅದನ್ನೇ ಮುಂದುವರಿಸಿಕೊಂಡು ಹೋಗಬೇಕೇ ಅಥವಾ ಶಿಕ್ಷಕರ ನೇಮಕಾತಿ ಆಗಬೇಕಾಗಿದೆಯೇ? ನೇಮಕಾತಿ ಆಗಬೇಕಾಗಿದ್ದರೆ ಏನಾದರೂ ಪದ್ಧತಿ ಪ್ರಕಾರ ಆಗಬೇಕು. ಅಥವಾ ಮನಸ್ಸಿಗೆ ಬಂದಂತೆ ಆಗಬೇಕೋ? ಇದು ಪ್ರಶ್ನೆ ಇವತ್ತಿನ ದಿವಸ ಸರ್ಕಾರದ ತಲೆಯನ್ನು ತಿನ್ನುತ್ತಿದೆ. ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತದೆ. ಇವತ್ತು ನಮ್ಮ ನೀತಿ ಏನೆಂದರೆ ಯಾರೇ ಶಿಕ್ಷಕರನ್ನು ನೇಮಕ ಮಾಡಿದರೂ ಅವರಿಗೆ ಏನು ಸ್ಕೇಲ್ ಸಿಗಬೇಕಾಗಿದೆಯೋ ಆ ಸ್ಕೇಲ್ ಅವನಿಗೆ ಸಿಗಬೇಕು. ನಾವು ಅನೇಕ ಕಡೆ ನೋಡಿದ ಹಾಗೆ ಅನೇಕ ಶಿಕ್ಷಕರುಗಳ ರೋಸ್ಟರ್ ಕೂಡಾ ಇಲ್ಲ. ಯಾರು ೨೫೦–೩೫೦ ರೂಪಾಯಿಗಳ ಪಗಾರದ ಮೇಲೆ ಶಿಕ್ಷಕರಾಗಿ ಬಂದು ಕೆಲಸ ಮಾಡುತ್ತಾರೋ ಅಂಥವರುಗಳ ರಿಸರ್ವೇಷನನ್ನು ಕೂಡಾ ಮಾಡಿಲ್ಲ. ಕೆಲವು ಕಡೆಯಂತೂ ಶಿಕ್ಷಕರುಗಳೇ ಇಲ್ಲ. ಯಾರಾದರೂ ತಂದೆ ತಾಯಿಗಳು ನಮ್ಮ ಊರಿನಲ್ಲಿ ಶಾಲೆಯಲ್ಲಿ ಶಿಕ್ಷಕರೇ ಇಲ್ಲ ಎಂದು ಹೇಳಿದರೆ, ನಿಮ್ಮ ಊರಿನಲ್ಲಿ ಪಿ ಯು ಸಿ ಪಾಸ್ ಆಗಿದ್ದವರು ಇದ್ದರೆ ಅಲ್ಲಿ ಶಿಕ್ಷಕರಾಗಿ ಕೆಲಸ ಮಾಡಲಿ, ಅವರಿಗೆ ಹಾನರರಿಯಂ ಕೊಡುತ್ತೇವೆ ಎಂದು ಹೇಳಿ ೨೫೦–೩೫೦ ರೂಪಾಯಿಗಳನ್ನು ಅಡ್–ಹಾಕ್ ಬೇಸಿಸ್ ಮೇಲೆ ಕೊಟ್ಟಿದ್ದಾರೆ. ಅವರನ್ನು ನಾನು ತಪ್ಪಿತಸ್ಥರು ಎಂದು ಹೇಳುವುದಕ್ಕೆ ತಯಾರಿಲ್ಲ. ಇಲ್ಲಿ ಪ್ರಶ್ನೆ ಇತ್ಯರ್ಥ ಆಗಬೇಕಾಗಿದೆ. ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕೆ ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕಾಗಿದೆ. ಈ ಬಾಧ್ಯದಲ್ಲಿ I have made it clear that we have not tarminated their services. ಅವರನ್ನು ರೆಗ್ಯುಲರ್ ಮಾಡಬೇಕು ಎಂದು ಹೇಳಿದರೆ, ಲೀಗಲ್ ಪೊಜಿಷನ್ ಏನಾಗುತ್ತದೆ? ಯಾರು ಯಾವ ೨೫೦–೩೫೦ ರೂಪಾಯಿಗಳ ಪಗಾರದ ಮೇಲೆ ಕೆಲಸ ಮಾಡತಕ್ಕಂಥವರನ್ನು ರೆಗ್ಯುರೈಸ್ ಮಾಡುವುದಕ್ಕೆ ಆಗುವುದಿಲ್ಲ. ರೆಗ್ಯುಲರ್ ಆಗಿ ಅವರನ್ನು ನೇಮಕಾತಿ ಮಾಡಬೇಕಾಗಿದ್ದರೆ ಅವರು ರೆಗ್ಯುಲರ್ ಆಗಿ ಅಪಾಯಿಂಟ್‌ಮೆಂಟ್ ಆಗಬೇಕು. ರೆಗ್ಯುಲರ್ ಅಪಾಯಿಂಟ್‌ಮೆಂಟ್ ಆಗಬೇಕಾಗಿದ್ದರೆ ರೆಗ್ಯುಲರ್ ಪ್ರೊಜರ್ ಪ್ರಕಾರ ಆಗಬೇಕು. ಅದಕ್ಕಾಗಿಯೇ ಡಿ.ಎಲ್.ಆರ್.ಸಿ. ಮುಂತಾದ ಅನೇಕ ಸಂಘ ಸಂಸ್ಥೆಗಳಿಂದ ಇನ್ನು ಮುಂದೆ ರೆಗ್ಯುಲರ್ ಆಗಿ ಅಪಾಯಿಂಟ್ ಮೆಂಟ್ ಮಾಡಬೇಕು. ಈಗಾಗಲೇ ಏನು ಕೆಲಸಕಾರ್ಯ ಮಾಡುತ್ತಿದ್ದಾರೆ. ಇವರ ಅರ್ಜಿಗಳನ್ನೂ ಕೂಡಾ ಸಮಾಧಾನಕರವಾಗಿ ಈ ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ರೆಕ್ರೂಟ್‌ಮೆಂಟ್ ಕಮಿಟಿಗಳು ಪರಿಶೀಲನೆ ಮಾಡಿ ಮಾಡುತ್ತವೆ. ಆದರೆ ಇವರನ್ನು ಕೆಲಸದಿಂದ ತೆಗೆದು ಹೊರಗೆ ಹಾಕಬೇಕು ಎಂದು ನಿರ್ಣಯವನ್ನು ಮಾಡಿ ಆಗಿದೆ ಎಂದು ಬಿಣ್ಣಪ್ಪನವರು ಕಟ್ಟಿ ಮಾತನಾಡತಕ್ಕಂಥದ್ದನ್ನು ಬಿಟ್ಟು ಇವತ್ತು ಮುಂದಿನ ಪೀಳಿಗೆಗೆ ಯಾವ ರೀತಿಯಲ್ಲಿ ಶಿಕ್ಷಣ ಸಿಗುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕಾಗಿದೆ ಆ ವ್ಯವಸ್ಥೆಯನ್ನು ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರು ಮತ್ತು ಆ ಕಡೆ ಕುಳಿತಂಥ ಸದಸ್ಯರುಗಳು ಸಹಕರಿಸಬೇಕು ಎಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಅಧ್ಯಕ್ಷರೇ, ಸಭಾನಾಯಕರು ಹೇಳಿದಂಥ ಪ್ರತಿಯೊಂದೂ ಮಾತನ್ನೂ ನಾನು ಒಪ್ಪುತ್ತೇನೆ. ಮತ್ತು ಅವರ ಗಮನಕ್ಕೆ ಇದೆಲ್ಲಾ ಬಂದಿದೆ ಎಂದರೆ ಸಂತೋಷದ

ಸಂಗತಿ. ಈ ಚರ್ಚೆಯಿಂದ ಸಭಾನಾಯಕರಿಗೆ, ರಾಜ್ಯದ ಮುಖ್ಯಮಂತ್ರಿಗಳಿಗೆ ಇರುವ ಪರಿಸ್ಥಿತಿಯ ಅರಿವು ಇದೆ ಎನ್ನುವುದು ಸಂತೋಷ. ಆದರೆ ಈ ಹೊರೆಯನ್ನು ಮಾತ್ರ ಹಿಂದಿನ ಸರ್ಕಾರದ ಮೇಲೆ ಹಾಕಿ ಜಾರಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಬೇಡ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.— ಏಳು ವರ್ಷಗಳಿಂದ ಏನು ಮಾಡಿದ್ದೀರಿ?

(ಗೊಂದಲ)

MR. SPEAKER.— I have called the Leader of the Opposition.

ಶ್ರೀ ಡಿ.ಬಿ ಚಂದ್ರೇಗೌಡ.— ಈ ರೀತಿ ಗಲಾಟೆ ಮಾಡುತ್ತಿರುವುದನ್ನು ನೋಡಿದರೆ ಮುಖ್ಯ ಮಂತ್ರಿಗಳು ಹೇಳಿದ ಮಾತಿಗೆ ವಿರೋಧ ಮಾಡುತ್ತೇನೆ ಎಂದು ಹೇಳಲೇನು? ಇದರ ಬಗ್ಗೆ ನಾನು ಏನು ಹೇಳಬೇಕು ಎಂದರೆ ಈಗ ನನಗೆ ಇಷ್ಟು ಪರಿಸ್ಥಿತಿಯ ಅರಿವು ಪೂರ್ಣವಾಗಿದೆ. ಇಲ್ಲಿ ನನಗೆ ಇರತಕ್ಕಂಥ ಕಸಿವಿಸಿ ಏನು ಎಂದರೆ ತತ್‌ಕ್ಷಣ ತಾವು ಹೇಳಿದಂಥ ಎಲ್ಲಾ ನೇಮಕಾತಿಗಳನ್ನು ಮಾಡುವುದಂ ತತ್‌ಕ್ಷಣ ಸಾಧ್ಯವಿಲ್ಲ. ಈಗ ಒಂದು ತಿಂಗಳು, ಎರಡು ತಿಂಗಳಲ್ಲಿ ಪರೀಕ್ಷೆಗಳು ಬರುತ್ತವೆ, ಅವರ ನೇಮಕಾತಿ ಗಳನ್ನು ಈಗ ತೆಗೆದರೆ, ಈ ಇರ್ರೆಗ್ಯುಲರ್‌ನ್ನು ತೆಗೆದ ಹಾಗೆಯೇ direction ಇರ್ರೆಗ್ಯುಲರ್ ಆದ ಹಾಗೆ.

SRI VEERENDRA PATIL I.— will make in clear. there Services have not been tarminated.

SRI D.B. CHANDRE GOWDA.—I am thankful to you ಇಷ್ಟು ಹೇಳಿದರೆ ನಾವು ಚರ್ಚೆ ಮಾಡುತ್ತಿರಲಿಲ್ಲ. ತಾವು ೧೦ ಸಾವಿರ ಶಿಕ್ಷಕರ ಹುದ್ದೆ ಖಾಲಿ ಇವೆ ಎಂದು ಹೇಳಿದ್ದೀರಿ, ಇವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಯಾವಾಗ ನೇಮಕಾತಿ ಕಾರ್ಯ ಪ್ರಾರಂಭ ಆಗುತ್ತದೆ ಎಂದು ತಿಳಿಸಿದರೆ ನಮಗೆ ಸಂತೋಷವಾಗುತ್ತದೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—೧೯೫೮ನೇ ಇಸವಿಯಲ್ಲಿ ರಾಜ್ಯಾಂಗದಲ್ಲಿ ನಿರ್ದೇಶನದ ಸೂತ್ರ ಸಂಹಿತೆಯ ಭಾಗ ವಿಧಿಯೊಳಗೆ ಶಾಶ್ವತಂತ್ರ್ಯ ಬಂದ ೧೦ ವರ್ಷಗಳಲ್ಲಿ ೧೪ ವರ್ಷದೊಳಗಿನ ಎಲ್ಲಾ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತೇವೆಂದು ಬರೆಯಲಾಗಿದೆ. ಇದುವರೆಗೂ ಅದು ಆಗದಿರುವುದಕ್ಕೆ ಯಾರನ್ನು ಕೇಳಬೇಕು ? ನಾವು ಮೂಲಕ್ಕೆ ಹೋಗಬಾರದು. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ.....

(ಗೊಂದಲ)

ಶ್ರೀ ಎಲ್. ಆರ್. ಶಿವರಾಮಗೌಡ.—ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ನಿಮ್ಮ ಹತ್ತಿರ ನಿಯಮದ ಪುಸ್ತಕ ಇದೆಯೆ ? ಯಾವ ಕಾರಣದ ಮೇಲೆ ನೀವು ಕ್ರಿಯಾಲೋಪ ಎತ್ತುತ್ತಿದ್ದೀರಿ ?

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಶಿಕ್ಷಕರು ೨೫೦ ರಿಂದ ೩೦೦ ರೂಪಾಯಿಗಳ ಸಂಬಳ ತೆಗೆದು ಕೊಂಡು ಕೆಲಸ ಮಾಡುತ್ತಿರುವುದು ದುರಂತ, ನಿಜ. ಇದನ್ನು ನಾನೂ ಒಪ್ಪುತ್ತೇನೆ. ಬೇರೆ ಉಪಾಧ್ಯಾಯರಿಗೆ ದೊರೆಯತಕ್ಕ ಪ್ರಮಾಣದ ಸ್ಕೇಲ್ ಇವರಿಗೆ ಸಿಕ್ಕಬೇಕು. ಶಿಕ್ಷಕರನ್ನು ಮುಂದೆ ಭರ್ತಿ ಮಾಡುವಾಗ ಈಗ ಕೆಲಸ ಮಾಡುತ್ತಿರುವವರ ಸೇವಾವಧಿಯನ್ನೂ ಸಹ ಗಮನದಲ್ಲಿಟ್ಟುಕೊಂಡು ನೇಮಕಾತಿಗಳನ್ನು ಮಾಡಬೇಕು. ತಾವು ಇದರ ಬಗ್ಗೆ ಒಂದು ನಿರ್ದೇಶನವನ್ನು ಕೊಟ್ಟು ಈಗ ಯಾರು ಜಿಲ್ಲಾ ಪರಿಷತ್ತಿನಲ್ಲಿ ತಾತ್ಕಾಲಿಕವಾಗಿ ೩೨೦-೫೮೦ ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ, ಅವರನ್ನು ಮುಂದೆ ರಿಕ್ರೂಟ್ ಮಾಡುವಾಗ ಅವರು ಮಾಡಿದಂತಹ ಸೇವೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ.....

ಅಧ್ಯಕ್ಷರು.—ಅವರು ಹೇಳಿದ್ದನ್ನು ಬಿಟ್ಟು ಮಾತನಾಡಿ.

ಶ್ರೀ ಬಸವರಾಜ ರಾಯ ರೆಡ್ಡಿ.—ಒಂದು ಮಾತನ್ನು ಈ ಪಂಗಡದಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ ಮಾನ್ಯ ಸಭಾ ನಾಯಕರು ಒಂದು ಅತ್ಯಂತ ಬೇಜವಾಬ್ದಾರಿಯಾದ ಮಾತನ್ನು ಹಿಂದಿನ ಸರ್ಕಾರದ ಮೇಲೆ ಹೇಳಿದ್ದಾರೆ.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

(ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಹಲವಾರು ಸದಸ್ಯರು ಒಟ್ಟಿಗೆ ಮಾತನಾಡ ತೊಡಗಿದರು)

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಅವರು ಶಾಂತವಾಗಿ ಕೇಳಿದರು. ಈಗ ಇವರು ಏನು ಹೇಳುತ್ತಾರೆ ಎನ್ನುವುದನ್ನು ನೀವೂ ಕೂಡ ಶಾಂತವಾಗಿ ಕೇಳತಕ್ಕದ್ದು.

(ಗೊಂದಲ)

ಅಧ್ಯಕ್ಷರು.—ಅವರು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ. ಅಷ್ಟರಲ್ಲಿ.....

(ಗೊಂದಲ)

ಅಧ್ಯಕ್ಷರು.—ಯಾರಾದರೂ ಒಬ್ಬರು ಮಾತನಾಡಿ. ನಿಮ್ಮ ಆಕ್ಷೇಪಣೆ ಏನು ? ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಬಸವರಾಜ ರಾಯರೆಡ್ಡಿಯವರು ಮಾತನಾಡುವಾಗ ಸಭಾನಾಯಕರು ಬೇಜವಾಬ್ದಾರಿಯಿಂದ ಮಾತನಾಡಿದರು ಎಂದು ಹೇಳಿರತಕ್ಕದ್ದು ಸ್ವೀಕಾರಾರ್ಹವಲ್ಲ, ಅದನ್ನು ತೆಗೆಸಬೇಕು.

ಅಧ್ಯಕ್ಷರು.—ಬೇಜವಾಬ್ದಾರಿ ಎನ್ನತಕ್ಕಂಥ ಪದದ ಬಗ್ಗೆ ನಿಮ್ಮ ಆಕ್ಷೇಪಣೆ ಅದು ಅನ್‌ಪಾರ್ಲಿಮೆಂಟರಿ ಎನ್ನತಕ್ಕಂಥಾದ್ದೇ.

ಶ್ರೀ ಬಸವರಾಜ ರಾಯರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಒಂದು ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ, ಮಾನ್ಯ ಸಭಾನಾಯಕರು ಹಿಂದಿನ ಸರ್ಕಾರದ ಬಗ್ಗೆ ಒಂದು ಬೇಜವಾಬ್ದಾರಿಯಾದ ಮಾತನ್ನು ಹೇಳಿದರು ಅದು ಏನು ಎಂದು ಹೇಳುವುದನ್ನು ಕೇಳತಕ್ಕ ಸೌಜನ್ಯ ಅವರಲ್ಲಿರಲಿ. ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾನಾಯಕರು, ಹಿಂದಿನ ಸರ್ಕಾರ ಶಿಕ್ಷಕರನ್ನು ಸರಿಯಾಗಿ ನೇಮಕಮಾಡಿಕೊಳ್ಳದೆ ಈ ರೀತಿ ಮಾಡಿ ಶಿಕ್ಷಣ ವ್ಯವಸ್ಥೆ ಹಾಳು ಮಾಡಿದರು ಎಂದು ಹೇಳಿದರು. ಹಿಂದಿನ ಸರ್ಕಾರ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅವರಿಗೇ ಅಧಿಕಾರ ಕೊಟ್ಟು ಈ ನೇಮಕಾತಿ ಮಾಡಲಾಗಿದೆ. ಮಾನ್ಯ ರಾಜ್ಯಪಾಲರಂ ತಮ್ಮ ಭಾಷಣದಲ್ಲಿ ಸ್ಥಳೀಯ ಆಗತ್ಯಗಳನ್ನು ಪೂರೈಕೆ ಮಾಡಲಿಕ್ಕೆ ಆ ಸಂಸ್ಥೆಗಳನ್ನು ಇನ್ನೂ ಹೆಚ್ಚು ಬಲಪಡಿಸುತ್ತೇವೆ, ಶಕ್ತಿಯುತವಾಗಿ ಮಾಡಲಾಗುವುದು" ಎಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್ ಅವರಂ ಭಾಷಣ ಮಾಡುತ್ತಾರೋ ಅಥವಾ ಕ್ಲಾರಿಫಿಕೇಷನ್ ಕೇಳುತ್ತಾ ಇದ್ದಾರೋ ?

ಅಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳಿದರೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ.—ನಾನೂ ಕೂಡ ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿದ್ದೇನೆ.

ಅಧ್ಯಕ್ಷರು.—ಅದಕೊಸ್ಕರವೇ ನಿಮಗೆ ಅವಕಾಶ ಕೊಟ್ಟಿರುವುದು.

ಶ್ರೀ ಬಸವರಾಜ ರಾಯರೆಡ್ಡಿ.—ಈ ಸಂದರ್ಭದಲ್ಲಿ ನಾನೂ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುವುದಿಷ್ಟೆ. ಹೋದ ಸರ್ಕಾರವಿದ್ದ ಕಾಲದಲ್ಲಿ ಯಾವ ಯಾವ ಶಾಲೆಯಲ್ಲಿ ಶಿಕ್ಷಕರಿಲ್ಲವೋ ಅಲ್ಲಿ

ತಾತ್ಕಾಲಿಕವಾಗಿ ಒಂದಿಷ್ಟು ಗೌರವ ಶಿಕ್ಷಕರನ್ನು ನೇಮಕಮಾಡಲಾಗಿದೆ. ಯಾವ ಗ್ರಾಮದಲ್ಲಿ, ತಾಂಡಾಗಳಲ್ಲಿ ಶಾಲೆಗಳಿಲ್ಲ ಅಲ್ಲಿ ಸಹಕಾರ ಶಾಲೆಗಳನ್ನು ತೆರೆದಿದ್ದೇವೆ, ಆ ಶಾಲೆಗಳಿಗೆ ಶಿಕ್ಷಕರನ್ನು ಕಾನೂನು ಪ್ರಕಾರ ನೇಮಕಮಾಡಲಿಕ್ಕೆ ಆಗಿಲ್ಲ. ಶಿಕ್ಷಕರನ್ನು ಕಾನೂನು ಪ್ರಕಾರ ನೇಮಕ ಮಾಡದೇ ಇರುವ ಕಾರಣ ಆ ಶಾಲೆಗಳನ್ನು ಬಂದ್ ಮಾಡಲಿಕ್ಕೆ ಆಗುವುದಿಲ್ಲ. ಇದಕ್ಕಾಗಿ ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟರು. ಸಹಾಯಧನ, ತಲಾದಾನ ೧೦ ರೂಪಾಯಿ ಕೊಡತಕ್ಕದ್ದು, ಈ ೧೦ ರೂಪಾಯಿಯನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನವರು ಸ್ವಂತವಾಗಿ ಮಂಡಲ್-೧ ಅಕೌಂಟ್‌ನಲ್ಲಿ ಖರ್ಚು ಮಾಡಿದ್ದಾರೆ. ಅದನ್ನು ಖರ್ಚು ಮಾಡುವುದಕ್ಕೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಗೆ ಸಂಪೂರ್ಣವಾದಂಥ ಅಧಿಕಾರ ಇದೆ. ಆಂದಮೇಲೆ ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂಥಾದ್ದಲ್ಲ. ಅವರು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಖರ್ಚು ಮಾಡಿದ್ದಾರೆ. ಖರ್ಚು ಮಾಡಿ ಗೌರವ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದಾರೆ. ಅವರಿಗೆ ಅನುಮತಿ ಕೊಡಿ. ಶಿಕ್ಷಕರನ್ನು ನೇಮಕ ಮಾಡಲಿಕ್ಕೆ ಕಾನೂನು ಪ್ರಕಾರ ನಿಮ್ಮ ಪರ್ಮಿಷನ್ ತೆಗೆದುಕೊಂಡು ಮಾಡಬೇಕು ಎಂಬ ಕಳಕಳಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದರು.

ಒಳ್ಳೆಯ ಕೆಲಸ ಮಾಡಿದರೆ, ವಿರೋಧ ಮಾಡುವುದಿಲ್ಲ. ತೀವ್ರವಾಗಿ ಈ ಒಂದು ನೇಮಕಾತಿಗೆ ಅಪ್ಪಣೆ ಕೊಡಿ. ಇದರ ಜೊತೆಗೆ ಆಪರೇಷನ್ ಬ್ಲಾಕ್‌ಬೋರ್ಡ್ ಯೋಜನೆಗೆ ಕೇಂದ್ರ ಸರ್ಕಾರ ಹಣ ಕೊಡಬೇಕು. ಸಂಬಳಕ್ಕೂ ಕೂಡ ಹಣಕಾಸಿನ ವ್ಯವಸ್ಥೆ ಇಲ್ಲದಂತಾಗಿದೆ. ಈ ಎರಡು ವಿಷಯಗಳ ಬಗ್ಗೆ ಕೂಡಲೇ ಗಮನಹರಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿರಿಯ ಸದಸ್ಯರುಗಳು ಈ ವಿಷಯದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳದೆ, ಸರ್ಕಾರದವರು ಏನೊಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಆರ್ಡರ್‌ನಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ shall not make recruitments or appointments of any categories of official without the prior permission of the government. Any appointment already made without prior permission are deemed to be irregular. ಈಗ ಮಾಡಿರತಕ್ಕ ನೇಮಕಾತಿಗಳು ಇರ್ರೆಗ್ಯುಲರ್ ಎಂದು ಹೇಳಿದ್ದಾರೆ. ಜಿಲ್ಲಾಪರಿಷತ್‌ನವರಿಗೆ ಪಗಾರ ಕೊಡಲಿಕ್ಕೆ ತ್ರಾಸವಾಗುತ್ತದೆ. Government has issued a circular No. RDP, 83, PIB 83 dated : 16-1-89 advising the Zilla Parishads not to recruit. But teachers have been appointed three years back and not after the circular has been issued. ಜಿಲ್ಲಾ ಪರಿಷತ್‌ನವರು ಆಡಿಟ್ ಅಬ್ಜೆಕ್ಷನ್ ಹಾಕಿದರೆ, ಈ ನೇಮಕಾತಿಯನ್ನು ಇಲ್ಲೀಗಲ್ ಎಂದು ಹಿಡಿದಿದ್ದರೆ ಪಗಾರ ಕೊಡಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಇದನ್ನೆಲಾ ಅವರು ಹೇಳಿದ್ದಾರೆ.

ಶ್ರೀ ವಿ. ಎಸ್. ಕೌಜಲಗಿ.—ಒಟ್ಟಿನಲ್ಲಿ ಆರ್ಡರ್ ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನೇಮಕ ಯಾರೋ ಮಾಡಿದರು, ವಿರೇಂದ್ರ ಪಾಟೀಲ್‌ರವರ ಸರ್ಕಾರ ಬಂದ ತಕ್ಷಣ ಅವರನ್ನು ಹೊರಗೆ ಹಾಕಿದ್ದಾರೆ.

ಅಧ್ಯಕ್ಷರು.—ನಿಮ್ಮ ಹೆಸರು ಇದರಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಈ ಪ್ರಶ್ನೆಯನ್ನು ನಿನ್ನೆ ತಮ್ಮ ಗಮನಕ್ಕೆ ತಂದಿದ್ದೆ. ತಾವು ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ತಾವು ಬರೀ ಬಲಗಡೆ ಕಿವಿ ಕೊಡುತ್ತಿದ್ದೀರಿ. ಎಡಗಡೆ ಕಿವಿಯನ್ನು ಈ ಕಡೆ ಕೊಡಿ. ಅಧ್ಯಕ್ಷರೆ, ನಾನು ೧೯೭೭ರಲ್ಲಿ ಶಾಸನ ಸಭೆಗೆ ಬಂದವನು ಇವೊತ್ತು ಬಂದಿಲ್ಲ. ಅದು ತವಗೂ ಗೊತ್ತಿದೆ. ತಾವು ಮಂತ್ರಿಗಳಾಗಿದ್ದಾಗ ನಾನು ಶಾಸಕನಾಗಿದ್ದೆ. ನಾನು ಮತ್ತು ತಾವು ಸ್ನೇಹಿತರು ಎನ್ನುವುದು ಗೊತ್ತಿದೆ. ಈಗ ನಾನು ಹೊಸ ಪಾಠ ಕಲಿಯೆ ಬೇಕಾಗಿಲ್ಲ ಹಳೆಯ ಪುಸ್ತಕ ಮತ್ತು ಹೊಸ ಪುಸ್ತಕ ಎರಡು ಇಟ್ಟಿದ್ದೇನೆ. ಇದು ಬಹಳ ಗುರುತರವಾದ ಪ್ರಶ್ನೆಯಾದ್ದರಿಂದ ಇದನು ಕೇಳುತ್ತಿದ್ದೇನೆ. ನಾನು ಒಂದು ಸಹಿ ಹಾಕಿ ನೋಟೀಸ್ ಕಳುಹಿಸದೆ ಇರಬಹುದು ಆದರೆ ಇದು ಗುರುತರವಾದ ಪ್ರಶ್ನೆಯಾದ್ದರಿಂದ ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ತಾವು ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸ್ನೇಹಿತರಾದರೆ ಏನು ಬೇಕಾದರೂ ಮಾತನಾಡಬಹುದು ಎಂದು ಅರ್ಥವೇ ? ಸಭೆಯ ಕಾರ್ಯಕಲಾಪವನ್ನು ಸರಿಯಾಗಿ ನಡೆಸಲಿಕ್ಕೆ ತಾವು ಸಹಾಯ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ನಾವು ಯಾವ ರೀತಿ ಬೇಕಾದರೂ ನಡೆದುಕೊಳ್ಳ ಬಹುದೆಂದು ಹೇಳುತ್ತಿಲ್ಲ. ಈ ಸಭೆಯ ಘನತೆ ಗೌರವಕ್ಕೆ ಧಕ್ಕೆ ತರತಕ್ಕ ಉದ್ದೇಶದಿಂದ ಮಾತನಾಡಂ ತ್ತಿಲ್ಲ. ಇದು ಬಹಳ ಗುರುತರವಾದ ಪ್ರಶ್ನೆ ಆಗಿರುವುದರಿಂದ ಹೇಳುತ್ತಿದ್ದೇನೆ. ಯಾರೋ ಮಾಡಿದಂಥ ತಪ್ಪಿಗೆ ಶಿಕ್ಷಕರ ಮೇಲೆ ಗಧಾಪ್ರಹಾರ ಮಾಡುವುದು ಬೇಡ. ಮತ್ತೆ ಅವರಿಗೆ ಖಾಯಂ ಮಾಡಿ ಅವರಿಗೆ ಬರಬೇಕಾದ ಸಂಬಳ ಸಾರಿಗೆಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಂ ಮಾಡುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಅಧ್ಯಕ್ಷರೆ, ಇದರ ಬಗ್ಗೆ ತಡೆಯಾಜ್ಞೆ ಇದೆ. ಸರ್ಕಾರದವರು ಈ ಪ್ರಕಾರ ಆರ್ಡರ್ ಹೊರಡಿಸಲಿಕ್ಕೆ ಬರುವುದಿಲ್ಲ. ಅದು ಕಂಟೆಮ್ಪ್ಟ್ ಆಫ್ ಕೋರ್ಟ್ ಆಗುತ್ತದೆ, ಆದ್ದರಿಂದ, ಸರ್ಕಾರ ಹೊರಡಿಸಿರತಕ್ಕ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಅರಿವು ಆಗಿರಬೇಕು, ಅವರಿಗೆ ಉತ್ತರ ತೃಪ್ತಿಕರವಾಗಿದೆ ಎಂದು ಅನಿಸುತ್ತದೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾನೂನು ಸುಮಾರು ಎರಡು ವರ್ಷಗಳ ಹಿಂದೆ ಜಾರಿಗೆ ಬಂತು. ಆಗ ನಾವು ವಿರೋಧಪಕ್ಷದಲ್ಲಿದ್ದೆವು. ಅದು ಜಾರಿಗೆ ಬಂದಾಗಿನಿಂದಲೂ ಸೆಕ್ಷನ್ ೧೮೨, ೧೪೪, ೨೮೫, ಮತ್ತೆ ೧೭೩ರ ಪ್ರಕಾರ ಏನು ಕ್ರಮ ತೆಗೆದುಕೊಂಡು ಆಯಾಯ ಇಲಾಖೆಗಳಿಗೆ ಯಾವ ಯಾವ ಅಧಿಕಾರವನ್ನು ವರ್ಗಾವಣೆ ಮಾಡಬೇಕಾಗಿತ್ತೋ, ಆ ಕಾನೂನನ್ನು ಯಾವ ರೀತಿ ನಿಯಮಾವಳಿ ಪ್ರಕಾರ ಮಾಡ ಬೇಕಾಗಿತ್ತೋ ಅದನ್ನು ಮಾಡಬೇಕಾಗಿತ್ತು. ಇವರು ಅದನ್ನು ಮಾಡಲಿಲ್ಲ. ಆದ್ದರಿಂದ, ಜಿಲ್ಲಾ ಪರಿಷತ್‌ನವರಿಗೆ ಏನಾಗಿದೆ ಅಂದರೆ ಅವರು ಸ್ವೇಚ್ಛೆಯಾಗಿ ನಾವು ಏನು ಬೇಕಾದರೂ ಮಾಡಬಹುದು ಎಂದು ಅವರಿಗೆ ಮನವರಿಕೆಯಾಗಿದೆ. ಈ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಾವು ಹೊರಗೂ ಮಾತನಾಡಿದ್ದೇವೆ ಮತ್ತು ಒಳಗೂ ಮಾತನಾಡಿದ್ದೇವೆ. ಈ ಒಂದು ಅಧಿಕಾರ ವಿಕೇಂದ್ರೀಕರಣವಾಗಿದೆ ಎಂದು ಮಂಡಲ್ ಪಂಚಾಯತ್‌ನವರು ಮತ್ತು ಜಿಲ್ಲಾಪರಿಷತ್‌ನವರು ಸ್ವೇಚ್ಛೆಯಾಗಿ ಏನು ಬೇಕಾದರೂ ಮಾಡಬಹುದು ಎನ್ನುವ ಭಾವನೆ ಬಂದಿದೆ ಸೆಕ್ಷನ್ ೧೮೨ ಮತ್ತು ಸೆಕ್ಷನ್ ೧೮೪ರ ಪ್ರಕಾರ ವರ್ಗಾವಣೆ ಆಗಿದೆ ಎನ್ನುವ ಭಾವನೆ ಬರಲಿಕ್ಕೆ ಸಾಕಷ್ಟು ಅವಕಾಶ ಇದೆ. ಅದೇ ರೀತಿ ಮಾಡಿ ಕೊಂಡು ಬಂದಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾನೂನು ಕಾಂಗ್ರೆಸ್ ಸರ್ಕಾರ ತಂದದ್ದು ಅಲ್ಲ. ಇದನ್ನು ಜನತಾಪಕ್ಷ, ಜನತಾದಳದ ಸರ್ಕಾರ ತಂದದ್ದು. ಇದನ್ನು ತಂದ ಮೇಲೆ ನೇರವಾಗಿ ಯಾವ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಅವರಿಗೆ ಕಾನೂನುಬದ್ಧವಾಗಿ ನಿಯಮಾವಳಿ ಪ್ರಕಾರ ಕೆಲಸ ಮಾಡಬೇಕೆಂದು ಪದೇ ಪದೇ ಆಗ್ರಹಿಂದಾಗ್ಗೆ ನಿರ್ದೇಶನಗಳನ್ನು ಕೊಟ್ಟು ಅವರು ಮಾಡತಕ್ಕ ಕೆಲಸ ಕಾರ್ಯಗಳನ್ನು ಸೀಮಿತದಲ್ಲಿಡಲಿಕ್ಕೆ ಅವಕಾಶ ಇತ್ತು, ಆದರೆ ಅವರು ಇದುವರೆಗೂ ಮಾಡಲಿಲ್ಲ. ಬಹಳ ಖಾತೆಗಳಿಗೆ ಮಾಡಿಲ್ಲ. ನಮ್ಮ ಸರ್ಕಾರ ಬಂದು ಹದಿನೈದು ದಿವಸಗಳು ಮಾತ್ರ ಆಗಿದೆ. ನೀವು ಎರಡು ವರ್ಷ ಗಳಲ್ಲಿ ಮಾಡಿರತಕ್ಕ ಕೆಲಸ ಕಾರ್ಯಗಳನ್ನು ನಾವು ಮನವರಿಕೆ ಮಾಡಿಕೊಂಡು ಮುಂದೆ ನಾವು ಕಾನೂನು ಪ್ರಕಾರ ಏನು ಮಾಡಬೇಕೆಂದು ಯೋಚನೆ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಬಹಳ ಸಂತೋಷ. ಈ ಒಂದು ಅಧಿಕಾರ ವಿಕೇಂದ್ರೀಕರಣದ ವಿಚಾರದ ಬಗ್ಗೆ ಬಹಳ ಭಾಷಣಗಳು ಆಗಿದೆ. ನಾನೂ ಸಹ ಮಾತನಾಡಿದ್ದೇನೆ ಮಾನ್ಯ ಸದಸ್ಯರಾದ ಜಾಲಪ್ಪನವರು ಸಹ ಮಾತನಾಡಿದ್ದಾರೆ. ವಿಕೇಂದ್ರೀಕರಣ ಎಂದರೆ ಏನು ? ಪ್ರಜಾಪ್ರಭುತ್ವದಲ್ಲಿ ವಿಕೇಂದ್ರೀಕರಣ ಎಂದರೆ ನಿಯಮಾವಳಿಗಳಿಗೆ ಮತ್ತು ಕಾನೂನಿಗೆ ಬಾಹಿರವಾಗಿ ನಡೆದುಕೊಳ್ಳತಕ್ಕ ಪದ್ಧತಿ ಅಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ. ಈ ಕಡೆ ಕುಳಿತಿರತಕ್ಕ ನಮ್ಮ ಸದಸ್ಯರು ಕೇಳಿರತಕ್ಕ ಪ್ರಶ್ನೆಗಳಿಗೆ ತಾವು ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಸಾಕು.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಭಾಷಣವನ್ನು ನಾವು ಕೇಳಿದ್ದೇವೆ. ಅವಕ್ಕೆ ನಾವು ಉತ್ತರ ವನ್ನು ಕೊಡುತ್ತೇವೆ. ಆದ್ದರಿಂದ ನಮ್ಮ ಭಾಷಣವನ್ನು ತಾವೂ ಕೂಡ ಕೇಳಲೇಬೇಕು. ಇಲ್ಲವಿದ್ದರೆ ನಾನು ಬಿಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದು ಕಾಲಿಂಗ್ ಅಟೆನ್‌ಷನ್ ಆದ್ದರಿಂದ ನಾನು ಹೇಳುತ್ತಿದ್ದೇನೆ ನಾವು ಕೇವಲ ಕ್ಲಾರಿಫಿಕೇಷನ್‌ನ್ನು ಮಾತ್ರ ಕೇಳಿದ್ದೇವೆ.....

ಶ್ರೀ ಬಿ. ಬಸವಲಿಂಗಪ್ಪ.—ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ೧೧೭೭ ಮಂದಿ ಶಿವಮೊಗ್ಗಾದಲ್ಲಿ ೩೫೦ ಮಂದಿ, ತುಮಕೂರಿನಲ್ಲಿ ೪೦ ಮಂದಿ, ಚಿಕ್ಕಮಗಳೂರಿನಲ್ಲಿ ೪೫೫ ಮಂದಿ, ಬಳ್ಳಾರಿಯಲ್ಲಿ ೬೫೦ ಮಂದಿ ಹೀಗೆ ಒಟ್ಟು ಸುಮಾರು ೨೮೨೦ ಮಂದಿ ಶಿಕ್ಷಕರನ್ನು ನೇಮಕಾತಿ ಮಾಡಿದ್ದಾರೆ ಇದನ್ನು ನೋಡಿಕೊಂಡು ಬಿಜಾಪುರ, ಧಾರವಾಡ, ಗುಲ್ಬರ್ಗಾ ಜಿಲ್ಲಾ ಪರಿಷತ್ತಿನವರು ತಮಗೂ ಕೂಡ ಅಧಿಕಾರ ಕೊಡಿ ಎಂದು ಕೇಳಿದ್ದಾರೆ. ಈಗಾಗಲೇ ೬ ಜಿಲ್ಲೆಗಳ ಜಿಲ್ಲಾ ಪರಿಷತ್ತಿನವರು ನೇಮಕಾತಿಯನ್ನು ಮಾಡಿದ್ದಾರೆ. ೨೦೦–೨೫೦ ರೂಪಾಯಿಗಳ ಸಂಬಳದ ಮೇಲೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸುಧೀರ್ಘವಾದ ಉತ್ತರವನ್ನು ಹೇಳಿದ್ದಾರೆ. ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ನಾನು ತಮಗೆ ಹೇಳುತ್ತೇನೆ, ಯಾವ ನೇಮಕಾತಿಗಳು ಸಕ್ರಮವಾಗಿ ಆಗಿವೆ ಅವುಗಳನ್ನು ರದ್ದು ಮಾಡುವುದಕ್ಕೆ ನಾವು ಹೋಗುವುದಿಲ್ಲ. ಯಾರ್ಯಾರು ನೇಮಕಾತಿ ಸಮಿತಿಯ ಮುಂದೆ ಹೋಗಿದ್ದಾರೆ ಅಂಥವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಆದರೆ ಅಕ್ರಮವಾಗಿರುವುದನ್ನು ಸಕ್ರಮಗೊಳಿಸುವುದಕ್ಕೆ ನಾವು ಸಿದ್ಧವಿಲ್ಲ. ಇಲ್ಲಿ ಜಿಲ್ಲಾ ಪರಿಷತ್ತಿನವರು ತಮಗಿರತಕ್ಕ ಅಧಿಕಾರವನ್ನು ಬಿಟ್ಟು ನೇಮಕಾತಿಯನ್ನು ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾವು ಏನು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು, ಅಥವಾ ಮುಂದೆ ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಿ ತೀರ್ಮಾನ ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.— ರಾಜ್ಯದಲ್ಲಿ ೧೧ ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಇನ್ನು ಎಷ್ಟು ಅವಧಿಯಲ್ಲಿ ಪ್ರೈಮರಿ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.— ಕಾನೂನು ಪ್ರಕಾರ ನೇಮಕಾತಿಗಳನ್ನು ಮಾಡಬೇಕೆಂದು ನಾವು ತೀರ್ಮಾನ ಕೈಗೊಂಡಿದ್ದೇವೆ. ಕಾನೂನು ಮಿತಿಯಲ್ಲಿ, ನಿಯಮಾವಳಿಗಳ ಮಿತಿಯಲ್ಲಿ ನಡೆದುಕೊಳ್ಳದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಏನು ಬೇಕಾದರೂ ಮಾಡಬಹುದು, ಹೇಗೆ ಬೇಕಾದರೂ ನಡೆದುಕೊಳ್ಳಬಹುದು ಎಂದು ಅಲ್ಲ. ನಾನು ಮಂತ್ರಿಯಾಗಿದ್ದೇನೆ, ಆದ್ದರಿಂದ ನಾನು ಏನು ಬೇಕಾದರೂ ಮಾಡಬಹುದು ಎಂದಲ್ಲ.

ಶ್ರೀ ಡಿ ಬಿ. ಚಂದ್ರೇಗೌಡ.— ನಿಪರೂ ರೋಜ್‌ಗಾರ್ ಯೋಜನೆಯ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುತ್ತೇನೆ. ತಾವೂ ಅದನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ನಾನೂ ಓದಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸ್ಪಷ್ಟವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ತಾವು ಏನು ಹೇಳುತ್ತೀರೆಂದು ತಮಗೆ ತಿಳಿದರೆ ಸಾಕು. ಇಡೀ ಜಗತ್ತಿಗೆಲ್ಲಾ ತಿಳಿಯಬೇಕಾದುದ್ದು ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ವಾಟಾಳ್ ನಾಗರಾಜ್‌ರವರೇ...

ಶ್ರೀ ವಾಟಾಳ್ ನಾಗರಾಜ್.— ವಾಟಾಳ್ ನಾಗರಾಜ್‌ರ್ ರೇ ಎಂದು ವಿಶ್ಲೇಷಣೆ ಏನೂ ಬೇಡ. ನನ್ನ ಬಗ್ಗೆ ತಾವು ವಿಶ್ಲೇಷಣೆ ಮಾಡುವುದು ಬೇಡ. ಬಸವಲಿಂಗಪ್ಪನವರು ಬಹಳ ಚೆನ್ನಾಗಿ ಮಾತನಾಡತಕ್ಕವರು...

ಅಧ್ಯಕ್ಷರು.— ಒಂದು ಸಂತೋಷದ ವಿಚಾರ ಎಂದರೆ ಅವರಿಗೆ ಶತ್ರುಗಳೇ ಇಲ್ಲ.

SRI B. BASAVALINGAPPA.— In democracy, it is not a free licence for anybody and everybody to do anything. Everybody must be in check and control of rules and regulations.

ಶ್ರೀ ವಾಟಾಳ್ ನಾಗರಾಜ್.— ಸ್ಪಷ್ಟವಾಗಿ ಅರ್ಥವಾಗತಕ್ಕ ತಿಳಿಗನ್ನಡದಲ್ಲಿ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ — ನಾವು ಪ್ರಜಾಪ್ರಭುತ್ವದ ನಿಯಮಾವಳಿಗಳಿಗೆ ಒಳಪಟ್ಟು ನಡೆದುಕೊಳ್ಳುತ್ತೇವೆ. ನಾವು ತಪ್ಪು ಮಾಡಿದರೆ ಜನರು ನಮ್ಮನ್ನು ಕೇಳುತ್ತಾರೆ. ನೇಮಕಾತಿ ನಿಯಮಾವಳಿಗಳು ಏನಿವೆ ಅವನ್ನೆಲ್ಲಾ ಬಿಟ್ಟು ಜಿಲ್ಲಾ ಪರಿಷತ್ತಿನವರು ನೇಮಕಾತಿಯನ್ನು ಮಾಡಿದ್ದಾರೆ. ಅವರಿಗೆ ಬೇಕಾದವರಿಗೆ ನೇಮಕಾತಿಯನ್ನು ಮಾಡಿಕೊಂಡಿದ್ದಾರೆ ಅವರನ್ನು ಈಗ ಮುಂದುವರಿಸಬೇಕೆ ? ಅಥವಾ ಬೇಡವೇ ಎಂದು ನಾವು ಯೋಚನೆ ಮಾಡುತ್ತಿದ್ದೇವೆ.

೧೨.೩೦ ಪಿ.ಎಂ.

ಅಧ್ಯಕ್ಷರು.— ಶ್ರೀ ಎಂ. ವಿ. ವೆಂಕಟಪ್ಪನವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬಹುದು.

SRI D.B. CHENDREGOWDA.— I am on a Point of Order, before calling the next Calling Attention The matter revised under calling attention notice is before the Court. I feel it would amount to subjudice and cannot be discussed under the provisions of the rules. ಮಾನ್ಯ ಎಂ. ವಿ. ವೆಂಕಟಪ್ಪನವರು ಎತ್ತಿರತಕ್ಕ ಗಮನ ಸೆಳೆಯುವ ಸೂಚನೆ ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿಗೆ ಸಂಬಂಧಿಸಿದೆ ಆದರೆ ಈ ವಿಷಯ ನ್ಯಾಯಾಲಯದಲ್ಲಿರುವುದರಿಂದ ಇದಂ ಸಬ್‌ಜುಡಿಸ್ ಆಗುತ್ತದೆ.

MR. SPEAKER.— It all depends upon what are the issues that have been framed before the Court.

SRI D.B. CHANDREGOWDA.— The same subject is pending before the High Court. I would request the Hon. Speaker to get the matter examined before we take up the matter.

ಶ್ರೀ ಬಿ. ಬಸವಲಿಂಗಪ್ಪ.— ಅವರು ಎತ್ತಿರತಕ್ಕ ವಿಷಯ ನಿಜವಾಗಿ ಹೈಕೋರ್ಟ್‌ನಲ್ಲಿದೆ. ಆದರೆ ಹೈಕೋರ್ಟ್‌ನವರು ಏನು ನಿರ್ಣಯವನ್ನು ಮಾಡುತ್ತಾರೆ ಎಂಬ ಬಗ್ಗೆ ನಾವು ಮಾತನಾಡುವುದಿಲ್ಲ ಆದರೆ ಇದರಲ್ಲಿ ಏನು ವಿಷಯಗಳಿವೆ ಅವುಗಳ ಬಗ್ಗೆ ಮಾತನಾಡುವುದರಲ್ಲಿ ಏನು ಅಭ್ಯಂತರ ವಿಲ್ಲವೆಂದು ನನಗನಿಸುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ.— ಮೊದಲು ವಿಚಾರ ಏನು ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.— ನೀವು ಹೇಳುವುದಕ್ಕೆ ಮುಂಚಿತವಾಗಿಯೇ ನಾನು ಈ ವಿಷಯವನ್ನು ಎತ್ತಿದ್ದೇನೆ.

ಗಮನ ಸೆಳೆಯುವ ಸೂಚನೆ

೨) ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ

ಶ್ರೀ ಎಂ.ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಕನ್ನಡದ ಹೇಳಿಕೆಯ ಪ್ರತಿ ನಮಗೆ ಬಂದಿಲ್ಲ. ಆದ್ದರಿಂದ.....

ಶ್ರೀ ಬಿ. ಬಸವಲಿಂಗಪ್ಪ.—ಇಂಗ್ಲೀಷ್‌ನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡಿಲ್ಲ. ಆದ್ದರಿಂದ ಇಂಗ್ಲೀಷ್‌ನಲ್ಲಿರುವುದನ್ನೇ ಓದುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಸ್ವಾಮಿ, ಕನ್ನಡದಲ್ಲಿ, ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ''ನನ್ನ ಸರ್ಕಾರವು ಆಡಳಿತ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡುತ್ತದೆ'' ಆದ್ದರಿಂದ ಕನ್ನಡದಲ್ಲೇ ಉತ್ತರವನ್ನು ಕೊಡಿ. ಏಕೆಂದರೆ ಇಂಗ್ಲೀಷ್ ಅರ್ಥವಾಗದೇ ಇರತಕ್ಕ ಸದಸ್ಯರು ಬಹಳ ಮಂದಿ ಇಲ್ಲಿದ್ದಾರೆ.

(ಗೊಂದಲ)

(ಮಾನ್ಯ ಸಚಿವರಿಗೆ ಹೇಳಿಕೆ ನೀಡಲು ಸದಸ್ಯರು ಅವಕಾಶ ಕೊಡಲಿಲ್ಲ.)